ನಮ್ಮ ಜನ
NAMMA JANA

ಸಂಪಾದಕರು: ದರ್ಶನ್.ಟಿ
Editor : DARSHAN.T

ಕನ್ನಡ ದಿನ ಪತ್ರಿಕೆ
Kannada Daily

ಸಂಪುಟ – 01 ಸಂಚಿಕೆ – 308 ಶೀರ್ಷಿಕೆ ಕೋಡ್: ಕೆಎಆರ್ ಕೆಎಎನ್ 28269 ಚಿತ್ರದುರ್ಗ ದಿನಾಂಕ: 01–07–2024 ಸೋಮವಾರ ಪುಟ: 4 ಬೆಲೆ : ರೂ.2–00
Volume - 01 Issue - 308 Title- Code: KARKAN 28269 Chitradurga Date: 01-07-2024 Monday Page: 4 Price: Rs. 2-00

ಒಳಪುಟದ ಸುದ್ದಿಗಳು
ಬಾಪೂಜಿವಿದ್ಯಾಸಂಸ್ಥೆಯ ಸರ್ವತೋಮುಖ ಬೆಳವಣಿಗೆಯಲ್ಲಿ ಜಿ.ಬಾಲರೆಡ್ಡಿ ಪಾತ್ರ ಅಪಾರ 2
ಸ್ಥಾನಮಾನಗಳು ಸಮಾಜ ಸೇವೆಗೆ ದೊರೆತ ಅವಕಾಶ: ರಾಜೇಶ್ವರಿ ಎನ್.ಹೆಗಡೆ 3
ಉಪ್ಪಾರ ಸಮುದಾಯದ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ: ಶಾಸಕ 4

ಸುದ್ದಿ, ಜಾಹಿರಾತಿಗೆ
9686622252



# ರಾಜವೀರ ಮದಕರಿನಾಯಕನ ಪಟ್ಟಾಭಿಷೇಕ ಸಂಭ್ರಮ

» ನಮ್ಮಜನ ವಿಶೇಷ

ಚಿತ್ರದುರ್ಗದ ಪಶ್ಚಿಮಭಾಗಕ್ಕೆ ಚಿತ್ರದುರ್ಗದ ಸಪ್ತಶಿಖರಗಳ ಬೆಟ್ಟ ಸಾಲಿಗೆ, ಹಸಿರು ರಾಕವಚವನ್ನುಕೊಡಿಸಿದಂತೆಹಬ್ಬದೆಗಾಧಿಮಲೆ ಗಿರಿಮಾಲೆ, ಅದರ ಬೆನ್ನಬದಿಗೆ, ಗಾಧಿಮಲೆ ಸಾಲಿನ ಮತ್ತೊಂದು ಸೀನಾದ ಹೊಸದುರ್ಗದ ಬೆಟ್ಟಗಳ ಪಂಕ್ತಿ. ಆ ಎರಡು ಬೆಟ್ಟಗಳ ಸಾಲಿನ ನಡುವೆ, ಸದಾ ಹಸಿರುಮುರಿನ ಹೆಸರನ್ನು ಸಾರ್ಥಕಪಡಿಸುವ ಪಚ್ಚೆಯ ಕಣಿವೆ. ಆ ಪಚ್ಚೆಕಣಿವೆಯ ಗೋಪುರ ಪದಕದಂತಿದೆ ಜಾನಕಲ್ಲು ಗ್ರಾಮ. ಆ ಗ್ರಾಮದ ಮಧ್ಯಭಾಗದಲ್ಲಿ ಚಿತ್ರದುರ್ಗದತ್ತ ಬರುವ ಶತ್ರುಗಳು ಸೈನ್ಯವನ್ನು ಎದುರಿಸಲು, ಎದೆಸೆಟಿಸಿ ನಿಂತ ಭಟನಂತಿದೆ ಜಾನಕಲ್ಲು ಗುಡ್ಡ. ಗುಡ್ಡದ ಎಡಬಲಭಾಗಗಳಲ್ಲೂ ಕಣ್ಣಿಟ್ಟಿ ಹೋಗುವವರೆಗೂ ಅಡಿಕೆ ತೆಂಗಿನ ತೋಟಗಳು, ಮಾವು, ಹುಣಿಸೆಯ ಮರದ ತೋವುಗಳು, ಬತ್ತದ ಗದ್ದೆಯ ಹಾಸು, ಮಲೆನಾಡ ಸೆರಗಿನ, ಹಸಿರಿನ ವಿವಿಧ ಛಾಯೆಗಳ ಲೀಲಾವಿಲಾಸವನ್ನು ನೋಡುತ್ತಾ ನಿಂತ ಮೈಯಲ್ಲಿ ಹಸಿರು ಹರ್ಷವಾಗಿ ಮೈತುಂಬುತ್ತದೆ. ಸುತ್ತಿ ಸುತ್ತಿ ಎಷ್ಟು ಸಲ ನೋಡಿದರೂ, ಇನ್ನಷ್ಟು ನೋಡಬೇಕೆನ್ನಿಸುವ ಆ ಹಸಿರಿನ ಅಮಲೇರಿದ ಕಣ್ಣುಗಳಿಂದ ನೋಡುತ್ತಾ ನಿಂತಿದ್ದ ಮದಕರಿನಾಯಕ.

ಗರಡಿಯ ಮನೆಯಲ್ಲಿ ಚಳಿಯಲ್ಲೂ ಬೆವರುವಷ್ಟು ಸಾಮುಮಾಡಿ, ಗರಡಿಮನೆಯ ಮೇಲಿನ ಬಾವುಟದ ಬತೇರಿಯನ್ನೇರಿ ನಿಂತು, ಗರಡಿಮನೆಯ ಮಟ್ಟಿಯ ಕೆಂಪುಧೂಳು ಕವಿದ ಮೈಗೆ ಇರುಳು ಬಂದುಹೋದ ಜಿನಗುಮಳೆಯಲ್ಲಿ ತೊಯ್ದು ತಣ್ಣಗೆ ಬೀಸುವ ತಂಗಾಳಿಯೂ ಹಿತವಾಗಿ ಸಾಮು ಮಾಡಿದ ಎದೆ, ತೋಳು, ತೊಡೆಗಳನ್ನು ನೀವಿಕೊಳ್ಳುತ್ತಾ ಮೈಮರೆತು ನಿಂತಿದ್ದ ಮದಕರಿಗೆ ಇಹಲೋಕ ಪ್ರಜ್ಞೆ ಬಂದದ್ದು. ಚಿತ್ರದುರ್ಗದತ್ತಣಿಂದ ವೇಗವಾಗಿ ಬರುತ್ತಿದ್ದ ಹತ್ತಿಪ್ಪತ್ತು ಮಂದಿ ಅಶ್ವಾರೋಹಿಗಳನ್ನು ಕಂಡಾಗಲೇ.

ಜಾನಕಲ್ಲೂ ಚಿತ್ರದುರ್ಗಸೀಮೆಯ ಆಯಕಟ್ಟಿನ ಗಡಿಕೋಟೆ. ದುರ್ಗದಿಂದ ಸೇನೆಯ ಜನ, ಅಲ್ಲಿಗಾಗಲಿ, ಅದರಾಚೆಗಿದ್ದ ಹೊಸದುರ್ಗದ ಕೋಟೆಗಾಗಲಿ ಹೋಗಿ ಬರುವುದು ಅಪರೂಪದ ದೃಶ್ಯವೇನೂ ಅಲ್ಲ. ಎಷ್ಟೋ ಬಾರಿ, ಬರೀ ಹತ್ತಿಪ್ಪತ್ತೇನು, ನೂರಾರು ಕುದುರೆಗಳ ಸೇನೆ ಬಂದದ್ದನ್ನು ಯುದ್ಧಕಾರ್ಯವಿದ್ದಾಗ, ಅಂಥ ಹೊತ್ತಿನಲ್ಲಿ ಬರೀ ಸೇನೆ ಬಂದು ಹೋಗುವುದೇನು, ಜಾನಕಲ್ಲು ಕೋಟೆಯೂ ಬಗೆಬಗೆಯ ಯುದ್ಧಚಟುವಟಿಕೆಗಳ ಜೇನುಗೂಡಾಗುತ್ತಿತ್ತು. ಆ ಸಮಯದಲ್ಲಿ ಮೂರು ದಿನ ಮುಂಚೆಯೇ ದುರ್ಗದತ್ತಣಿಂದ ಯುದ್ಧದ ಸುದ್ದಿಯ ಗಾಳಿ ಬೀಸುತ್ತಿತ್ತು. ಈಗ ಅಂಥ ವಾರ್ತೆಯೇನೂ ಬಂದಿರಲಿಲ್ಲ. ಆದರೂ ಇಷ್ಟು ಹೊತ್ತಿಗೆ ಮುಂಚೆ ಈ ಸವಾರರೇಕೆ ಬರುತ್ತಿದ್ದಾರೆ ಎನಿಸಿ, ಹುಡುಗುತನದ ಉತ್ಸಾಹದಲ್ಲಿ ಹತ್ತಿರದಲ್ಲಿದ್ದ ಬತೇರಿಯ ಕಾವಲುಸೈನಿಕನಿಗೆ "ಜೋಗನಾಯಕ...ದುರ್ಗದ ಕಡೆಯಿಂದ ಕುದುರೆಗಳು ಬರುತ್ತಿವೆ. ಅಪ್ಪಯ್ಯನಿಗೆ ಸುದ್ದಿ ಹೇಳು"ಎಂದು ಕೂಗಿ ಹೇಳಿ, ಕಾಲಕಳೆದಂತೆ ಹತ್ತಿರವಾಗುತ್ತಿದ್ದ ಅಶ್ವಾರೋಹಿಗಳನ್ನು ಕುತೂಹಲದಿಂದ ನೋಡುತ್ತಾ ನಿಂತಿದ್ದ, ಮದಕರಿನಾಯಕ.

ದೇವತೆಗಳ ಹಾರೈಕೆಯೇ ಮಂಗಳನಿನಾದವಾಗಿ ಹೊರಹೊಮ್ಮಿದಂತೆ, ಹತ್ತಾರು ಗುಡಿಗಳಿಂದ ಗಂಟೆ, ಜಾಗಟೆ, ಶಂಖಗಳ ನಾದ. ದುರ್ಗದ ಗುಹೆಗಹ್ವರಗಳಿಂದ ಮಾರ್ದನಿಸಿದ ದಿನ–ಶಕವರ್ಷ 1676ನೇ ಭಾವಸಂವತ್ಸರದ ಆಷಾಢ ಶುದ್ಧ ದ್ವಾದಶಿಯ ದಿನ– ಸಂಪಿಗೆ ಸಿದ್ಧೇಶ್ವರನ ದೇವಾಲಯದ ಮುಂದಿನ ಪಟ್ಟಾಭಿಷೇಕಾಂಗಣದಲ್ಲಿ, ಮಣಿಖಚಿತ ದಿವ್ಯ ಹೇಮಸಿಂಹಾಸನದ ಮೇಲೆ, ಪುರೋಹಿತರು ನಿಷ್ಕರ್ಷಿಸಿದ ಶುಭಮುಹೂರ್ತದಲ್ಲಿ, ಹೊನ್ನುಡುಗೆಯುಟ್ಟು, ರತ್ನಕಿರೀಟ ತೊಟ್ಟು, ಬಾಲರವಿಯಂತೆ ಬೆಳಗುತ್ತಾ, ಸಿದ್ದರು ಅನುಗ್ರಹಿಸಿದ ದೆಸೆಗಟ್ಟಿನ ಧೂಳಿತ. ಉತ್ಸವಾಂಬೆಯ ಭಂಡಾರವನ್ನು ಲಲಾಟದಲ್ಲಿ ಧರಿಸಿ, ಕೈಯಂಬು ಹಿಡಿದು, ವಿಪತ್ರ ಸ್ತೋಮ ಗಂಭೀರ ಧ್ವನಿಯಲ್ಲಿ ರಾಜ್ಯಭಿಷೇಕದ ಮಂತ್ರೋಚ್ಚಾರಣೆ ಮಾಡುತ್ತಿರಲು, ದುರ್ಗದ

ಅರಸು ಪೀಠಕ್ಕೆ ರಕ್ಷೆಯೆಂಬಂತೆ ರಾಜಗುರುಗಳಾದ ಶ್ರೀ ಮುರುಗೀಸ್ವಾಮಿಗಳು, ಕೂಡಲೀ ಶೃಂಗೇರಿಯ ಶ್ರೀ ಶಾರದಾಪೀಠದ ಶ್ರೀಗಳು ರಜತಪೀಠದಲ್ಲಿ ಮಂಡಿಸಿರಲು, ಮದಕರಿನಾಯಕರು ಪಟ್ಟಾಭಿಷಿಕ್ತ ರಾದರು.

ವಿಪ್ರೋತ್ತಮರ ವೇದಾಶೀರ್ವಾದದ ಧ್ವನಿಗಿಂತ ಹತ್ತುಪಟ್ಟು ಮಿಗಿಲಾಗಿ ಉಚ್ಚಸ್ವರದಿಂದ ಜಯಘೋಷ ಕೂಗಿದ ಜನಸ್ತೋಮ ಹೊಸ ಅರಸರಿಗೆ ಜನತಾಶೀರ್ವಾದ ನೀಡಿತು.

ರಾಜ್ಯದ ಪ್ರಧಾನಿಗಳು, ದಳವಾಯಿಗಳು ಪೇಟೆ–ಪಟ್ಟಣಶೆಟ್ಟರು. ಅರಸುಮಿತ್ರರು ತಮ್ಮ ಶಕ್ತ್ಯಾನುಸಾರ ಪಟ್ಟಗಾಣಿಕೆ ಕೊಟ್ಟು, ಹೂ–ತಳಿರಿನ ಹಂದರವಿದ್ದ ರಾಜಾಂಗಣವನ್ನು ಹೊನ್ನಿನ ವಜ್ರ–ವೈಡೂರ್ಯಗಳ ಪ್ರದರ್ಶನಶಾಲೆಯನ್ನಾಗಿ ಮಾಡಿದನಂತರ ದೇವತಾಪ್ರಸಾದ, ಗುರುಗಳ ಆಶೀರ್ವಾದ, ಜಡಶಿಲೆಯನ್ನು ಚೈತನ್ಯದ ಚಿಲುಮೆಯನ್ನಾಗಿ ಮಾಡುವ ಜನತೆಯ ಆನಂದೋನ್ಮತ್ತ ಜಯಘೋಷದಿಂದ, ಆನಂದೋದ್ವೇಗಗಳು ಎದೆಯನ್ನು ತುಂಬಿ ತೂಗುತ್ತಿರಲು, ಗಂಟಲಾಳದಲ್ಲಿ ಹುದುಗಲೆಳಸುವ ಮಾತನ್ನು ಪ್ರಯತ್ನಪೂರ್ವಕವಾಗಿ ಹೊರತಂದು–

"ನಾವಿಂದು ಅರಸಾಗಿರುವುದು ನಿಮ್ಮ ವಿಶ್ವಾಸದಿಂದ, ನಾವಿಂದು ಕುಳಿತ ಈ ಸ್ವರ್ಣ ಸಿಂಹಾಸನಕ್ಕಿಂತಲೂ ಮಿಗಿಲಾದದ್ದು ನಿಮ್ಮ ಹೃದಯದಲ್ಲಿರುವ ಪ್ರೇಮಸಿಂಹಾಸನ, ನೀವು ಕೊಟ್ಟ ಆಸನಕ್ಕೆ ಅರ್ಹರಾಗಿ ಬಾಳುವಂತೆ, ದುರ್ಗದ ದೇವ–ದೇವಿಯರು, ಸಿದ್ದ–ಸತ್ಪುರುಷರು, ಗುರು–ಹಿರಿಯರು ನಮ್ಮನ್ನು ಆಶೀರ್ವದಿಸಿ. ನಮ್ಮನ್ನು ಅರಸಾಗಿ ಆರಿಸಿದಿರಿ, ಆ ಪ್ರೇಮಕ್ಕೆ ನಮ್ಮ ದೇಹ ಇರುವಷ್ಟು ದಿನವೂ, ಇದರ ಹನಿಹನಿ ರಕ್ತವೂ ಕೃತಜ್ಞವಾಗಿರುತ್ತದೆ. ಆ ಶಕ್ತಿ ಆ ಭಾವನೆ ಸದಾ ನಮ್ಮಲ್ಲಿ ಎಚ್ಚರವಾಗಿರುವಂತೆ ಅನುಗ್ರಹಿಸಿ"ಎಂದಷ್ಟೇ ಹೇಳಿ, ಕುಳಿತರು ನಾಯಕರು, ಕಲಿಸಿದ ಮಾತನ್ನು ನಿಧಾನವಾಗಿ ಆಡಿ. ಆ ಮಾತು ಕೇಳಿದ ಜನ ಹರ್ಷದಲ್ಲಿ ಹುಚ್ಚಾಗಿ ಜಯಧ್ವನಿ ಮಾಡಿದರು. ಅದರೊಂದಿಗೆ ಸ್ಪರ್ಧಿಸುವಂತೆ ಭಟರಾಜರು ನಾಯಕರ ಬಿರುದು–ಬಾವಲಿಗಳನ್ನು ಉಗ್ಗಡಿಸಿದರು.ಇದೆಲ್ಲವನ್ನೂ ಕಂಡು ಕೇಳಿ, ಹರ್ಷದಲ್ಲಿ ಹುಚ್ಚೇರಿದಂತೆ, ಝುಂಡಾಬತೇರಿಯ ಮೇಲಿದ್ದ ಕುಸುಂಬಿವರ್ಣದ ಹನುಮದ್ಗರುಡ ರಾಜಧ್ವಜ ಬೀಸುಗಾಳಿಯೊಂದಿಗೆ ಸ್ಪರ್ಧಿಸಿ, ನರ್ತಿಸಿತು. "ಚಿರಾಯುವಾಗಿ ಬಾಳು ನಮ್ಮ ದೊರೆ'–ಎಂದು ಜನ ಕೂಗಿದರು. ಸಹಸ್ರ ಸಹಸ್ರ ಮಂದಿ ಆ ನೋಟವನ್ನು ಕಂಡು ಹಿಗ್ಗಿದರು.

## ಪಾಳೇಗಾರರಲ್ಲಿ ಸಾಹಸಿ ಮದಕರಿನಾಯಕ

ಮಧ್ಯಕಾಲೀನ ಕರ್ನಾಟಕದಲ್ಲಿ ವಿಜಯನಗರೋತ್ತರ ಕಾಲಘಟ್ಟದಲ್ಲಿ ಆಳ್ವಿಕೆ ನಡೆಸಿದ (ಪಾಳೆಯಗಾರ) ಮನೆತನಗಳಲ್ಲಿ ಚಿತ್ರದುರ್ಗ ಸಂಸ್ಥಾನ ಪ್ರಮುಖವಾದದು. ವಿಜಯನಗರ ಸಾಮ್ರಾಟರ ಸಾಮಂತರಾಗಿ ಅಧಿಕಾರಕ್ಕೆ ಬಂದ ಇವರು, 1568ರಿಂದ 1779 ರವರೆಗೆ ಸುಮಾರು 211 ವರ್ಷ ಸ್ವತಂತ್ರರಾಗಿ ಆಳ್ವಿಕೆ ನಡೆಸಿದರು. ಚಿತ್ರದುರ್ಗವನ್ನು ಕೇಂದ್ರಸ್ಥಾನ ಮಾಡಿಕೊಂಡು 13 ನಾಯಕ ಅರಸರು ಆಳಿದ್ದಾರೆ. 'ವಾಲ್ಮೀಕಿ ಗೋತ್ರದ ಶ್ರೀಮನ್ಮಹಾನಾ ಯಕಚಾರ್ಯ ಕಾಮಗೇತಿ ಕಸ್ತೂರಿ' ಎಂಬ ಅಭಿದಾನವನ್ನು ಹೊಂದಿದ್ದ ಈ ಅರಸರು 'ಹಗಲುಕಗೊಲೆಯ ಮಾನ್ಯ', 'ಗಂಡುಗೊಡಲಿಯ ಸರ್ಜಾ', 'ಚಂದ್ರಗಾವಿ ಛಲದಾಂಕ್ಯ', 'ಧೂಳ್ ಕೋಟೆ ವಜೀರ', 'ಗಾದ್ರಿಮಲೆ ಹೆಬ್ಬುಲಿ' ಇತ್ಯಾದಿ ಬಿರುದುಗಳಿಂದ ಪುರಸ್ಕೃತರಾಗಿದ್ದರು.

ಚಿತ್ರದುರ್ಗ ಸಂಸ್ಥಾನದ ಮೊದಲ ನಾಯಕ ಆರಸನೆಂದರೆ ಮತ್ತಿ ತಿಮ್ಮಣ್ಣ ನಾಯಕ ( 1568–1589). ಈತನ ತರುವಾಯ ಒಂದನೇ ಓಬಣ್ಣ ನಾಯಕ (1589–1603), ಒಂದನೇ ಕಸ್ತೂರಿ ರಂಗಪ್ಪ ನಾಯಕ (1603–1652), ಇಮ್ಮಡಿ ಮದಕರಿ ನಾಯಕ (1652–1675), ಇಮ್ಮಡಿ ಓಬಣ್ಣನಾಯಕ (1675) , ಕಸ್ತೂರಿ ಚಿಕ್ಕಣ್ಣನಾಯಕ (1675–1686), ಮುಮ್ಮಡಿ ಮದಕರಿ ನಾಯಕ (1686–1688), ದೊಣ್ಣೆ ರಂಗಪ್ಪ ನಾಯಕ (1688), ಸೂರ್ಯಕಾಂತಿ ರಂಗಪ್ಪನಾಯಕ (1689), ಬಿಚ್ಚುಗತ್ತಿ ಭರಮಣ್ಣ ನಾಯಕ (1689–1721), ಹಿರೇಮದಕರಿ ನಾಯಕ (1721–1749), ಇಮ್ಮಡಿ ಕಸ್ತೂರಿ ರಂಗಪ್ಪ ನಾಯಕ (1749–1754), ರಾಜವೀರ ಮದಕರಿ ನಾಯಕ (1754–1779). ಈ ಅರಸರು ಮಹಾರಣಪಂಡಿತರು, ಮಹಾ ಧರ್ಮನಿಷ್ಠರೂ, ಗುರುಭಕ್ತಿ ಯುಳ್ಳವರೂ, ಪ್ರಜಾವತ್ಸಲರೂ, ಪಕ್ಷಪಾತರಹಿತ ರಾಜನೀತಿ ನಿಪುಣರು, ಕೃಷಿ–ವಾಣಿಜ್ಯಗಳ ಪೋಷಕರೂ ಹಾಗೂ ಸಂರಕ್ಷಕರೂ ಆಗಿದ್ದರು.

ಕರ್ನಾಟಕದರಾಜಕೀಯ ಮತ್ತು ಸಾಂಸ್ಕೃತಿಕ ಚರಿತ್ರೆಯಲ್ಲಿ ಮಹತ್ವದ ಪಾತ್ರ ವಹಿಸಿರುವ ಚಿತ್ರದುರ್ಗ ನಾಯಕ ಅರಸರಲ್ಲಿ ಕೊನೆಯ ದೊರೆ ರಾಜವೀರ ಮದಕರಿ ನಾಯಕ, ಈತನನ್ನು ಇತಿಹಾಸದಲ್ಲಿ ಚಿಕ್ಕಮದಕರಿ, ಕೊನೇ ಮದಕರಿ, 5ನೇ ಮದಕರಿ, ವೀರಮದಕರಿ ಎಂದೆಲ್ಲಾ ಕರೆಯಲಾಗಿದೆ. ಈತನು ಜಾನಕಲ್ಲು ತೊದಲು ಭರಮಪ್ಪ ನಾಯಕನ ಎರಡನೇ ಮಗನಾಗಿದ್ದನು. 1754ರಲ್ಲಿ ಕಸ್ತೂರಿ ರಂಗಪ್ಪ ನಾಯಕ ಮರಣ ಹೊಂದಿದ ಸಂದರ್ಭದಲ್ಲಿ ಈತನ ತಾಯಿ ಗಂಡಿಲ ಓಬವ್ವ ನಾಗತಿಯು ಜಾನಕಲ್ಲಿನಿಂದ ಭರಮಪ್ಪನ ಮಗ 'ಚಿಕ್ಕ ಮದಕರಿ'ಯನ್ನು ಕರೆತಂದು ದುರ್ಗದಲ್ಲಿ ಪಟ್ಟಕಟ್ಟಿದಳು. ಈತ ಪಟ್ಟಾಭಿಷಿಕ್ತನಾ– ದಾಗ ಕೇವಲ 12 ವರ್ಷದ ಬಾಲಕ.



ಪುಟ 2

## ಫಾಸ್ಟ್ ನ್ಯೂಸ್

### ರಾಜವೀರ ಮದಕರಿನಾಯಕನ ಪಟ್ಟಾಭಿಷೇಕ ಸಂಭ್ರಮ



» ಮೊದಲ ಪುಟದಿಂದ

ಮದಕರಿ ನಾಯಕ ತನ್ನ ಆಳ್ವಿಕೆ ಅವಧಿಯಲ್ಲಿ ಕೈಗೊಂಡ ಹಲವು ರಾಜಕೀಯ ನಿರ್ಣಯಗಳು ಚಿತ್ರದುರ್ಗ ಸಂಸ್ಥಾನದ ಕೀರ್ತಿಯನ್ನು ಭಾರತದ ಹಾಗೂ ವಿಶೇಷವಾಗಿ ದಕ್ಷಿಣ ಏಷ್ಯಾದಲ್ಲಿ ಹರಡಲು ಕಾರಣ ಇವೆನಿಸಿದವು. ಮದಕರಿನಾಯಕನ ಆಳ್ವಿಕೆಯಿಂದಾಗಿಯೇ ಚಿತ್ರದುರ್ಗ ಸಂಸ್ಥಾನವು ಭಾರತದಲ್ಲಿ ಪರಾಕ್ರಮಿ ಆಳ್ವಿಕೆ ಹೊಂದಿದ ಮತ್ತು ಅತ್ಯಂತ ಬಲಿಷ್ಠ ಸೈನ್ಯದಿಂದ ಹೆಚ್ಚು ಪ್ರವರ್ಧಮಾನಕ್ಕೆ ಬರಲು ಸಾಧ್ಯವಾಯಿತು. ಅತಿ ಮುಖ್ಯವಾಗಿ ಶ್ರೀರಂಗಪಟ್ಟಣದ ನವಾಬರು ಮತ್ತು ಮರಾಠಾ ಪೇಶ್ವೆಗಳೊಡನೆ ಈ ನಾಯಕನು ಇಟ್ಟುಕೊಂಡಿದ್ದ ರಾಜಕೀಯ ಬಾಂಧವ್ಯ ಮತ್ತು ನಡೆಸಿದ ಹೋರಾಟಗಳು ಆತನ ರಾಜಕೀಯ ದೂರದೃಷ್ಟಿ ಹಾಗೂ ಶೌರ್ಯ– ಸಾಹಸಗಳನ್ನು ಪ್ರತಿನಿಧಿಸುತ್ತವೆ. ತನ್ನ ಬದುಕಿನ ಹೆಚ್ಚಿನ ಸಮಯವನ್ನು ಯುದ್ಧಗಳಲ್ಲಿ ಭಾಗಿಯಾಗುತ್ತಿದ್ದ ಮದಕರಿನಾಯಕರ ಸಂಸ್ಥಾನವನ್ನು ಬಲಪಡಿಸುವಲ್ಲಿ, ರಾಜ್ಯವನ್ನು ಸುಭಿಕ್ಷೆಯಿಂದ ಇಟ್ಟುಕೊಳ್ಳುವಲ್ಲಿ ವಹಿಸುತ್ತಿದ್ದ ಪಾತ್ರ ವಿಶೇಷವಾದದ್ದಾಗಿದೆ. ಸ್ವಾಭಿಮಾನಿ, ಸಾಹಸಿ, ನಿರ್ಭಿಡೆ ನಡೆಯ ಮದಕರಿ ದುರ್ಗದ ಮಣ್ಣಿಗೆ ಸಾಂಸ್ಕೃತಿಕ ಮಹತ್ವ ತಂದುಕೊಡುವಲ್ಲಿ ಮಹತ್ವದ ಪಾತ್ರವಹಿಸಿದವನು. ಸುತ್ತಲಿನ ಹರಪನಹಳ್ಳಿ, ರಾಯದುರ್ಗ,ಬಿದನೂರು,ಸವಣೂರು ಮುಂತಾದ ಸಂಸ್ಥಾನಿಕರೊಂದಿಗೆ ನಿರಂತರ ಕಾಳಗಗಳಲ್ಲಿ ನಿರತನಾಗಿರುತ್ತಿದ್ದ. ಹೈದರಾಲಿಯೊಂದಿಗೆ ವಿಶೇಷ ಸ್ನೇಹ ಇರಿಸಿಕೊಂಡಿದ್ದ ಮದಕರಿ ಆತನ ದಂಡಯಾತ್ರೆಗಳಲ್ಲಿ ಪಾಲ್ಗೊಂಡು ಅನೇಕ ಬಗೆಯಲ್ಲಿ ಸಹಾಯ ಮಾಡಿದೆ. ಕೊನೆಯಲ್ಲಿ ಹೈದರ್ ಕಣ್ಣು ದುರ್ಗದ ಮೇಲೆ ಬಿದ್ದು ಚಿತ್ರದುರ್ಗದ ಮೇಲೆಯೂ ದಂಡೆತ್ತಿ ಬಂದ. ನಾಲ್ಕು ಬಾರಿ ದುರ್ಗದ ಮೇಲೆ ಯುದ್ಧ ಮಾಡಿದ. ಕೊನೆಯ ಯುದ್ಧ 1779ರ ಫೆಬ್ರುವರಿಯಲ್ಲಿ ಪ್ರಾರಂಭವಾಗಿ ನಾಲ್ಕು ತಿಂಗಳುಗಳ ಕಾಲ ನಡೆದು ಮೇ ತಿಂಗಳಲ್ಲಿ ದುರ್ಗದ ಪತನದೊಂದಿಗೆ ಅಂತ್ಯವಾಯಿತು. ರಾಜವೀರ ಮದಕರಿ ನಾಯಕನ ಕುರಿತಂತೆ ಸಮಕಾಲೀನ ಕವಿ ಚಂದ್ರಭೀಮನ 'ಮದಕರಿ ರಾಜೇಂದ್ರನ ದಂಡಕ', 'ಭೀಮಾಜಿ ಪಂತನ', 'ಚಿತ್ರದುರ್ಗದ ಬಟ್ಟೆರು' ಹಾಗೂ ಚಿನ್ನದಮನೆ ರಾಮಪ್ಪನ 'ಚಿನ್ಮೂಲಾದ್ರಿ ಗಿರಿದುರ್ಗದಲ್ಲಿ ಆಳಿದ ಹಿಂದಿನ ಆರಸರು ಕೃತಿಗಳು ವಸ್ತುನಿಷ್ಠ ಮಾಹಿತಿಗಳನ್ನು ನೀಡುತ್ತವೆ.

### ಜುಲೈ 12ರಂದು ಚಿತ್ರದುರ್ಗ ತಾ.ಪಂ ತ್ರೈಮಾಸಿಕ ಸಭೆ

» ಚಿತ್ರದುರ್ಗ

ಚಿತ್ರದುರ್ಗ ತಾಲ್ಲೂಕು ಪಂಚಾಯತ್ 2024–25ನೇ ಸಾಲಿನ ತ್ರೈಮಾಸಿಕ ಕೆ.ಡಿ.ಪಿ ಪ್ರಗತಿ ಪರಿಶೀಲನಾ ಸಭೆಯನ್ನು ಜುಲೈ 12ರಂದು ಬೆಳಿಗ್ಗೆ 11ಕ್ಕೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಚಿತ್ರದುರ್ಗ ವಿಧಾನಸಭಾ ಕ್ಷೇತ್ರ ಶಾಸಕ ಕೆ.ಸಿ.ವೀರೇಂದ್ರ (ಪಪ್ಪಿ) ಸಭೆಯ ಅಧ್ಯಕ್ಷತೆ ವಹಿಸುವರು ಎಂದು ತಾಪಂ ಕಾರ್ಯನಿರ್ವಾಹಕ ಅಧಿಕಾರಿ ತಿಳಿಸಿದ್ದಾರೆ.

### ವೃದ್ಧೆ ಕಾಣೆ: ಪತ್ತೆಗೆ ಮನವಿ

» ಚಿತ್ರದುರ್ಗ



ಹೊಳಲ್ಕೆರೆ ತಾಲ್ಲೂಕಿನ ತೊಡರನಾಳ್ ಗ್ರಾಮದ ವೃದ್ಧೆ ಪಾರ್ವತಮ್ಮ (86 ವರ್ಷ) ಅವರು ಜೂನ್ 28ರಂದು ಕಾಣೆಯಾಗಿರುವ ಕುರಿತು ಹೊಳಲ್ಕೆರೆಯ ಚಿತ್ರಹಳ್ಳಿ ಗೇಟ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ. ಕಾಣೆಯಾದ ವೃದ್ಧೆಯ ಚಹರೆ ಇಂತಿದೆ. ಪಾರ್ವತಮ್ಮ ಗಂಡ ಲೇಟ್ ರುದ್ರಪ್ಪ, ಸುಮಾರು 86 ವರ್ಷ, ಎಣ್ಣೆಗೆಂಪು ಬಣ್ಣ, ಅಗಲ ಮುಖ, ಸಾಧಾರಣ ಮೈಕಟ್ಟು, ಸುಮಾರು 5.5 ಅಡಿ ಎತ್ತರ, ಬಿಳು ಕೂದಲು, ಕನ್ನಡ ಭಾಷೆ ಮಾತನಾಡುತ್ತಾರೆ. ಮನೆ ಬಿಟ್ಟು ಹೋಗುವಾಗ ಹಳದಿ ಬಣ್ಣದ ಸೀರೆ ಧರಿಸಿರುತ್ತಾರೆ. ಈ ಮೇಲ್ಕಂಡ ವೃದ್ಧೆಯ ಕುರಿತು ಮಾಹಿತಿ ತಿಳಿದು ಬಂದಲ್ಲಿ ಹೊಳಲ್ಕೆರೆ ತಾಲ್ಲೂಕು ಚಿತ್ರಹಳ್ಳಿ ಗೇಟ್ ಪೊಲೀಸ್ ಠಾಣೆಗೆ ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

# ಇಂದು ನಾಡ ದೊರೆ ರಾಜವೀರ ಮದಕರಿನಾಯಕ ಪಟ್ಟಾಭಿಷೇಕ ದಿನ






» ಚಿತ್ರದುರ್ಗ

ನಾಡ ದೊರೆ ರಾಜವೀರ ಮದಕರಿನಾಯಕ ಪಟ್ಟಾಭಿಷೇಕ ಅಲಂಕರಿಸಿದ ದಿನವಾದ ಜು.1 ರಂದು ತರಾಸು ರಂಗ ಮಂದಿರದಲ್ಲಿ ಕಾರ್ಯಕ್ರಮ ಹಮ್ಮಿಕೊಂಡಿದ್ದು ಎಲ್ಲಾ ಸಮಾಜದ ಮುಖಂಡರು ಭಾಗವಹಿಸಿ ಎಂದು ಮಾಜಿ ನಗರಸಭೆ ಅಧ್ಯಕ್ಷ ಮತ್ತು ನಾಯಕ ಸಮಾಜದ ತಾಲೂಕು ತಾಲೂಕು ಅಧ್ಯಕ್ಷ ಬಿ.ಕಾಂತರಾಜ್ ಮನವಿ ಮಾಡಿದ್ದಾರೆ.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ರಾಜವೀರ ಮದಕರಿನಾಯಕ 270ನೇ ಪಟ್ಟಾಭಿಷೇಕ ಕಾರ್ಯಕ್ರಮದ ಕುರಿತು ಮಾತನಾಡಿದ ಅವರು ಮದಕರಿನಾಯಕನ ಆಳ್ವಿಕೆಯಲ್ಲಿ ಎಲ್ಲಾ ಸಮಾಜದ ರಕ್ಷಣೆ ಮಾಡುವ ಮೂಲಕ ದುರ್ಗದ ಅಭಿವೃದ್ಧಿಗೆ ಶ್ರಮಿಸಿದ್ದರು. ಅಂತಹ ಮಹಾನ್ ದೊರೆಯನ್ನು ವರ್ಷಕ್ಕೆ ಮೂರು ಬಾರಿ ನೆನಪು ಮಾಡಿಕೊಳ್ಳುವ ಕೆಲಸ ಮಾಡುತ್ತಿದ್ದು ಅವರ ಪಟ್ಟಾಭೀಷೇಕ, ಜಯಂತಿ ಮತ್ತು ಪುಣ್ಯ ಸ್ಮರಣೆಯ ಕಾರ್ಯಕ್ರಮವನ್ನು ಮಾಡಲಾಗುತ್ತದೆ ಈ ಹಿನ್ನಲೆಯಲ್ಲಿ ಜುಲೈ 1 ರಂದು ಸಹ ಮದಕರಿನಾಯಕ ಪಟ್ಟಕ್ಕೆ ಏರಿದ ದಿನವಾಗಿರುವುದಿಂದ ಸ್ಮರಿಸಿ ಅವರ ನೆನಪಿನ ಜೊತೆ ಅವರ ಜೀವನ ವಿಷಯಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಮುಂದಿನ ಪೀಳಿಗೆಗೆ ಮದಕರಿನಾಯಕನ ನೆನಪುಗಳನ್ನು ತಿಳಿಸೋಣ ಎಂದರು.

ಚಿತ್ರದುರ್ಗದ ಅಭಿವೃದ್ಧಿಗೆ ಮದಕರಿ ನಾಯಕರು ತಮ್ಮದೇ ಆದ ಕೂಡುಗೆಯನ್ನು ನೀಡಿದ್ದಾರೆ, ಅದರ ಸ್ಮರಣೆ ಇಂದಿನ ದಿನದಲ್ಲಿ ಆಗತ್ಯವಾಗಿದೆ. ನಮ್ಮ ನಾಯಕರ ಬಗ್ಗೆ ಕೇಂದ್ರ ಸರ್ಕಾರ ಕಳೆದ ಚುನಾವಣೆಯಲ್ಲಿ ಮದಕರಿ ಥಿಮ್ ಪಾರ್ಕನ್ನು ಮಾಡಿಕೊಡುವ ಬಗ್ಗೆ ಭರವಸೆಯನ್ನು ನೀಡಿತ್ತು ಆದರೆ ಅದರ ಬಗ್ಗೆ ಈವರೆವಿಗೂ ಇದರ ಬಗ್ಗೆಯೂ ಸಹಾ ಕಾರ್ಬಕ್ರಮದಲ್ಲಿ ರಾಜಕೀಯ ವ್ಯಕ್ತಿಗಳಿಗೆ ಮನವಿ ಮಾಡಲಾಗುವುದು. ಇದರೊಂದಿಗೆ ಚಿತ್ರದುರ್ಗದ 7 ಸುತ್ತಿನ ಕೋಟೆಯ ಅಭೀವೃದ್ಧಿಯ ಬಗ್ಗೆಯೂ ಸಹಾ ನೆನಪು ಮಾಡಲಾಗುವುದು ಎಂದ ಕಾಂತರಾಜ್ ತಿಳಿಸಿದರು.

ಇಂದಿನ ದಿನಮಾನದಲ್ಲಿ ರಾಷ್ಟ್ರ ನಾಯಕರನ್ನು ಜಾತಿಗೆ ಸೀಮಿತ ಮಾಡಲಾಗಿದೆ ಆದರೆ ಮದಕರಿ ನಾಯಕರು ಜಾತ್ಯಾತೀತ ನಾಯಕರಾಗಿದ್ದಾರೆ, ಅವರ ಕಾರ್ಯಕ್ರಮವನ್ನು ಎಲ್ಲರು ಸೇರಿ ಮಾಡಬೇಕಿದೆ ಇಲ್ಲಿ ಜಾತಿಗಿಂತ ನೀತಿ ಮುಖ್ಯವಾಗಿದ್ದು ಅವರು ಮಾಡಿದ ಕಾರ್ಯಗಳು ನಮಗೆ ದಾರಿದೀಪವಾಗಿವೆ ಎಂದು ತಿಳಿಸಿ, ಕಾರ್ಯಕ್ರಮದಲ್ಲಿ ಮದಕರಿನಾಯಕರ ಆಳ್ವಿಕೆ, ಚಿತ್ರದುರ್ಗದ ಜಲಮೂಲಗಳ ಬಗ್ಗೆ ಮಹಾಮಥೇಶ್ ರವರು ಉಪನ್ಯಾಸ ನೀಡಲಿದ್ದಾರೆ ಎಂದರು.

ಜುಲೈ 1 ರಂದು ಸೋಮವಾರ ಬೆಳಗ್ಗೆ ಮದಕರಿನಾಯಕ ಪ್ರತಿಮೆಗೆ 11 ಗಂಟೆ ಮಾಲರ್ಪಣೆ ಮಾಡಲಾಗುತ್ತದೆ. ನಂತರ ತರಾಸು ರಂಗ ಮಂದಿರದಲ್ಲಿ 12 ಗಂಟೆಗೆ ವೇದಿಕೆ ಕಾರ್ಯಕ್ರಮ ಆಯೋಜಿಸಲಾಗಿದೆ. ಈ ಕಾರ್ಯ ಕ್ರಮದಲ್ಲಿ ಭಾಗವಹಿಸುವ ಅತಿಥಿಗಳು ಈ ಕಾರ್ಯಕ್ರಮಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್, ಶಾಸಕರಾದ ಟಿ.ರಘುಮೂರ್ತಿ ಕೆ.ಸಿ.ವೀರೇಂದ್ರ ಪಪ್ಪಿ, ಎನ್.ವೈ.ಗೋಪಾಲಕೃಷ್ಣ, ಬಿ.ಜಿ.ಗೋವಿಂದಪ್ಪ ಸೇರಿ ಅನೇಕ ಗಣ್ಯರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ಜಿಲ್ಲಾ ನಾಯಕ ಸಮಾಜದ ಜಿಲ್ಲಾಧ್ಯಕ್ಷ ಹೆಚ್.ಜೆ.ಕೃಷ್ಣಮೂರ್ತಿ ಮಾತನಾಡಿ ಮದಕರಿನಾಯಕ ಅವರ ಇತಿಹಾಸವನ್ನು ಪಠ್ಯದಲ್ಲಿ ಸೇರಿಸಲು ಪ್ರಯತ್ನ ನಡೆಸಲಾಗುತ್ತದೆ. ಮುಂದಿನ ದಿನದಲ್ಲಿ ಹೋರಾಟವನ್ನು ಹಮ್ಮಿಕೊಳ್ಳುತ್ತೇವೆ. ಓನಕೆ ಒಬವ್ವರವರ ಜೀವನ ಚರಿತೆ ಈಗಾಗಲೇ ಪುಸಕ್ತದಲ್ಲಿ ಇದೆ. ಇದೇ ರೀತಿ ನಮ್ಮ ನಾಯಕಮದಕರಿಯ ಜೀವನಚರಿತೆಯನ್ನು ನಮ್ಮ ಪೀಳೀಗೆಗೆ ತಿಳಿಸುವ ಕಾರ್ಯವನ್ನು ಪಠ್ಯದ ಮೂಲಕ ಮಾಡಬೇಕಿದೆ ಎಂದರು. ಈ ಸಂದರ್ಭದಲ್ಲಿ ಜಿಲ್ಲಾ ನಾಯಕ ಸಮಾಜದ ಮುಖಂಡರಾದ ಮಾಜಿ ಸದಸ್ಯ ತಿಪ್ಪೇಸ್ವಾಮಿ, ಗೋಪಾಲಸ್ವಾಮಿ ನಾಯಕ, ಅಂಜಿನಪ್ಪ, ಕಾಟೀಹಳ್ಳಿ ಕರಿಯಪ್ಪ ಮತ್ತು ಸಮಾಜ ಅನೇಕ ಮುಖಂಡರು ಇದ್ದರು.

# ಬಾಪೂಜಿ ವಿದ್ಯಾಸಂಸ್ಥೆಯ ಸರ್ವತೋಮುಖ ಬೆಳವಣಿಗೆಯಲ್ಲಿ ಜಿ.ಬಾಲರೆಡ್ಡಿ ಪಾತ್ರ ಅಪಾರ

» ಚಳ್ಳಕೆರೆ



ಬಾಪೂಜಿವಿದ್ಯಾಸಂಸ್ಥೆಯ ಶೈಕ್ಷಣಿಕ ಪ್ರಗತಿಗೆ ಕಳೆದ 35 ವರ್ಷಗಳಿಂದ ಅವಿರತವಾಗಿ ಕಾರ್ಯನಿರ್ವಹಿಸಿ ಶಿಕ್ಷಣದ ಹಿರಿಮೆಯನ್ನು ಎತ್ತಿಹಿಡಿದಿದ್ದಲ್ಲದೆ, ಎಲ್ಲರ ಮೆಚ್ಚುಗೆ ಮಾತ್ರರಾದ ಪ್ರಾಂಶುಪಾಲ ಜಿ.ಬಾಲರೆಡ್ಡಿ ಈ ಭಾಗದ ಶಿಕ್ಷಣ ಕ್ಷೇತ್ರದ ಧೀಮಂತ ವ್ಯಕ್ತಿ ಎಂದು ಕ್ಷೇತ್ರದ ಶಾಸಕ, ಸಣ್ಣಕೈಗಾರಿಕೆ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಟಿ.ರಘುಮೂರ್ತಿ ತಿಳಿಸಿದರು.

ಅವರು, ನಗರದ ಬಾಪೂಜಿ ವಿದ್ಯಾಸಂಸ್ಥೆ ಆಡಿಟೋರಿಯಂನಲ್ಲಿ ಬಾಪೂಜಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾಗಿ ಸೇವೆಯಿಂದ ನಿವೃತ್ತಿಹೊಂದಿದ ನಿರ್ಗಮನ ಪ್ರಾಂಶುಪಾಲ ಜಿ.ಬಾಲರೆಡ್ಡಿ, ಪತ್ನಿ ಸುರೇಖಾರೆಡ್ಡಿಯವರನ್ನು ಅಭಿನಂದಿಸಿ ಮಾತನಾಡಿದರು. ಶಿಕ್ಷಣ ಕ್ಷೇತ್ರದಲ್ಲಿ ಬಾಲರೆಡ್ಡಿಯವರನಿರಂತರ ಶ್ರಮದ ಹಿಂದೆ ಅವರ ಪತ್ನಿಯ ಪಾತ್ರವೂ ಸಹ ಹೆಚ್ಚಿದೆ. ಚಳ್ಳಕೆರೆ ತಾಲ್ಲೂಕುಕಷ್ಟೇಯಲ್ಲದೆ, ರಾಜ್ಯಾದೆಲ್ಲೆಡೆ ಬಾಪೂಜಿವಿದ್ಯಾಸಂಸ್ಥೆಯ ಪ್ರಗತಿಯ ಬಗ್ಗೆ ಜನ ವಿಶ್ವಾಸ ವ್ಯಕ್ತಪಡಿಸುತಿದ್ದಾರೆ. ಶಿಕ್ಷಣ ಕ್ಷೇತ್ರದ ಸೇವೆ ಅವರಿಗೆ ಹೆಚ್ಚು ಗೌರವವನ್ನು ತಂದುಕೊಟ್ಟಿದೆ ಎಂದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ನೇರಲಗುಂಟೆರಾಮಣ್ಣ ನಿರ್ಗಮನ ಪ್ರಾಂಶುಪಾಲ ಜಿ.ಬಾಲರೆಡ್ಡಿಯವರ ಕಾರ್ಯಗಳ ಬಗ್ಗೆ ಪ್ರಶಂಸಿ ಮಾತನಾಡಿ, ಚಳ್ಳಕೆರೆಯಂತಹ ನಗರದಲ್ಲಿ ವಿದ್ಯಾಸಂಸ್ಥೆ ಕಟ್ಟಿಬೆಳೆಸುವುದು ಸಾಹಸ ಕೆಲಸ ಆದರೆ, ಬಾಲರೆಡ್ಡಿ ಒಬ್ಬ ಶಿಕ್ಷಕನಾಗಿ ಈ ಸಂಸ್ಥೆ 1992ರಲ್ಲಿ ಪಾದಾರ್ಪಣೆ ಮಾಡಿ 2024ರಲ್ಲಿ ಪ್ರಾಂಶುಪಾಲರಾಗಿ ನಿವೃತ್ತರಾಗುತ್ತಿದ್ಧರೆ. ಒಟ್ಟಾರೆ ತಮ್ಮ ಸೇವಾವಧಿಯಲ್ಲಿ ಬಾಪೂಜಿಸಂಸ್ಥೆಯ ಬೆಳವಣಿಗೆಗೆ ನಿರಂತರ ಶ್ರಮಿಸಿದ್ದಾರೆ. ಪ್ರೌಢಶಾಲೆ, ಪದವಿ, ಪದವಿಪೂರ್ವ ಕಾಲೇಜು, ಬಾಪೂಜಿ ಆಸ್ಪತ್ರೆ ಕಟ್ಟಡ, ಆಡಿಟೋರಿಯಂ ನಿರ್ಮಾಣ, ಆಯುರ್ವೇದಿಕ್ ಆಸ್ಪತ್ರೆ ನಿರ್ಮಾಣ ಹೀಗೆ ಪ್ರತಿಯೊಂದು ಕಾರ್ಯದಲ್ಲೂ ಸಕ್ರಿಯವಾಗಿ ಭಾಗವಹಿಸಿ ವಿದ್ಯಾಸಂಸ್ಥೆಯ ಬೆಳವಣಿಗೆಯಲ್ಲಿ ಅಗ್ರಸ್ಥಾನಗಳಿಸಿದ್ದಾರೆ. ಅವರು ಮಾಡಿದ ಸೇವೆ ಜನರ ಮನಸ್ಸಿನಲ್ಲಿ ಶಾಶ್ವತವಾಗಿದೆ ಎಂದರು.

ಸನ್ಮಾನವನ್ನು ಸ್ವೀಕರಿಸಿ ಮಾತನಾಡಿದ ಜಿ.ಬಾಲರೆಡ್ಡಿ, ಬಾಪೂಜಿ ವಿದ್ಯಾಸಂಸ್ಥೆ ನನಗೆ ಎಲ್ಲಾ ರೀತಿಯಲ್ಲಿ ಆಶ್ರಯ ನೀಡಿದೆ. ಶಿಕ್ಷಣ ಕ್ಷೇತ್ರವನ್ನು ಬೆಳೆಸುವ ನನ್ನ ಆಸೆಗೆ ಬಾಪೂಜಿ ವಿದ್ಯಾಸಂಸ್ಥೆ ತುಂಬಾ ಸಹಕಾರಿಯಾಯಿತು. ಶಾಸಕರೂ ಸೇರಿದಂತೆ ಎಲ್ಲರೂ ನನ್ನ ಕಾರ್ಯದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ಧಾರೆ. ಆದರೆ, ಇದು ನನ್ನೊಬ್ಬನಿಂದ ಮಾತ್ರ ಸಾಧ್ಯವಾಗಿಲ್ಲ, ನನ್ನೊಂದಿಗೆ ಈ ಸಂಸ್ಥೆಯ ಹಲವಾರು ವ್ಯಕ್ತಿಗಳು ಕೈಜೋಡಿಸಿದ್ದಾರೆ. ಈ ವಿದ್ಯಾಸಂಸ್ಥೆ ಇನ್ನೂ ಹೆಚ್ಚು ಖ್ಯಾತಿಗಳಿಸಲಿ ಎಂದು ಶುಭಹಾರೈಸುವ ಎಂದರು.

ಜಿ.ಬಾಲರೆಡ್ಡಿಯವರ ಆಪ್ತಮಿತ್ರ ನೇರಲಗುಂಟೆರಾಮಣ್ಣ, ಜಿ.ತಿಪ್ಪೇಸ್ವಾಮಿರೆಡ್ಡಿ, ಕಾರ್ಯದರ್ಶಿ ಜಗದೀಶ್, ಡಾ.ಬಸವರಾಜು, ಮಂಜಣ್ಣ, ವೆಂಕಟೇಶ್‌ಮೂರ್ತಿ, ಡಾ.ಬಾಬುಕುಮಾರ್, ಡಾ.ತಿಪ್ಪೇಸ್ವಾಮಿ, ಶಿವಲಿಂಗಪ್ಪ, ಪ್ರಭುಸ್ವಾಮಿ, ಮಂಜುನಾಥರೆಡ್ಡಿ ಮುಂತಾದವರು ಮಾತನಾಡಿದರು.

ಕಂದಾಯ ಇಲಾಖೆ ಪ್ರಗತಿ ಪರಿಶೀಲನಾ ಸಭೆಯಲ್ಲಿ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಸೂಚನೆ

# ನಿಗಧಿತ ನಮೂನೆಯಲ್ಲಿ ನಿಖರ ಮಾಹಿತಿ ನೀಡಿ



» ಚಿತ್ರದುರ್ಗ

ಕರ್ನಾಟಕ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಗೆ ನಿಗಧಿತ ನಮೂನೆಯಲ್ಲಿ ಮಾಹಿತಿ ಸಲ್ಲಿಸುವ ಸಂಬಂಧ ನಿಗದಿತ ನಮೂನೆಗಳಲ್ಲಿ ಈಗಾಗಲೇ ಸಿದ್ಧಪಡಿಸಿರುವ ಮಾಹಿತಿಯನ್ನು ಇನ್ನೊಮ್ಮೆ ಪರಿಶೀಲಿಸಬೇಕು. ಅಂಕಿ ಅಂಶಗಳು ತಾಳೆಯಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಂಡು ಮಾಹಿತಿ ಸಲ್ಲಿಸಬೇಕು ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಕಂದಾಯ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಭಾನುವಾರ ಕರ್ನಾಟಕ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಗೆ ನಿಗಧಿತ ನಮೂನೆಯಲ್ಲಿ ಮಾಹಿತಿಯನ್ನು ಸಲ್ಲಿಸುವ ಸಂಬಂಧ ಕಂದಾಯ ಇಲಾಖೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಆಯೋಜಿಸಲಾಗಿರುವ ಸಭೆಗೆ ಸಂಬಂಧಿಸಿದಂತೆ ಮಾಹಿತಿಯನ್ನು ಸಿದ್ದಪಡಿಸಿ ಸಲ್ಲಿಸುವ ವಿಚಾರಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಸರ್ಕಾರಿ ಜಮೀನು ಮಾಹಿತಿ, ಪಹಣಿಗೆ ಆಧಾರ್ ಸೀಡಿಂಗ್, ಸರ್ಕಾರಿ ಲ್ಯಾಂಡ್ ಬೀಟ್ ಸೇರಿದಂತೆ ಇನ್ನಿತರೆ ಕಂದಾಯ ಇಲಾಖೆ ವಿಷಯಗಳ ಕುರಿತು ಪ್ರಗತಿ ಪರಿಶೀಲನೆ ನಡೆಸಿದ ಜಿಲ್ಲಾಧಿಕಾರಿಗಳು, ನಿಖರ ಮಾಹಿತಿ ನೀಡುವಂತೆ ಕಂದಾಯ ಇಲಾಖೆ ಅಧಿಕಾರಿಗಳಿಗೆ ತಿಳಿಸಿದರು.

## ಪ್ರಮುಖ ಸುದ್ದಿ

ಹರಿಹರ ಪಂಚಮಸಾಲಿ ಪೀಠದ ಶ್ರೀ ವಚನನಾಂದ ಸ್ವಾಮೀಜಿ.

# ಪ್ರತಿಭಾವಂತ ಮಕ್ಕಳನ್ನು ಸಮುದಾಯದ ಆಸ್ತಿಯನ್ನಾಗಿ ಮಾಡಿ

» ಹೊಸದುರ್ಗ



ಸಮುಧಾಯ ಪ್ರತಿಭಾವಂತ ಮಕ್ಕಳನ್ನು ಗುರುತಿಸಿ ಪ್ರೋತ್ಸಹಿಸಿದರೆ, ಅವರು ಸಮಾಜದ ಮುಂದೆ ಆಸ್ತಿಯಾಗುತ್ತಾರೆ ಎಂದು ಹರಿಹರದ ಪಂಚಮಸಾಲಿ ಪೀಠದ ಶ್ರೀ ವಚನಾನಂದ ಸ್ವಾಮಿಜಿ ತಿಳಿಸಿದರು.

ಪಟ್ಟಣದ ಜಯದೇವ ಸಭಾಂಗಣದಲ್ಲಿ ಭಾನುವಾರ ವೀರಶೈವ ಲಿಂಗಾಯಿತ ಪಂಚಮಸಾಲಿ ಸಮಾಜ ಆಯೋಜಿಸಿದ್ದ ಜಿಲ್ಲಾ ಮಟ್ಟದ ಪ್ರತಿಭಾ ಪುರಸ್ಕಾರ ಸಮಾರಂಭದ ಸಾನಿಧ್ಯವಹಿಸಿ ಅವರು ಮಾತನಾಡಿದರು.

ಪಂಚಮಸಾಲಿ ಸಮುದಾಯ ಉದ್ದಾರವಾಗಬೇಕು ಎನ್ನುವುದು ನಮ್ಮ ಹಾಗೂ ಶ್ರೀಮಠದ ಆಶಯವಾಗಿದೆ. ನಾನು ಜಗತ್ತನ್ನು ನೋಡಿದ್ದೇನೆ. ಬೇರೆ ಯಾವುದನ್ನು ನೋಡುವ ಅಗತ್ಯವಿಲ್ಲ. ಪಂಚಮಸಾಲಿ ಸಮುದಾಯವೇ ನನ್ನ ನಿಜವಾದ ಜಗತ್ತಾಗಿದೆ. ಮುಂದಿನ ವರ್ಷ ಚಿತ್ರದುರ್ಗದ ಜಿಲ್ಲಾ ಮಟ್ಟದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಹರಿಹರದ ಪೀಠದಲ್ಲಿ ಮಾಡಲು ಮುಂದಗಬೇಕು. ಎಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಪಂಚಮಸಾಲಿ ಪೀಠಕ್ಕೆ ಭೇಟಿ ನೀಡುವ ಪ್ರವೃತ್ತಿ ರೂಢಿಸಿಕೊಳ್ಳಿ ಎಂದು ಸಲಹೆ ನೀಡಿದರು.ಬೌದ್ಧಿಕ ಶ್ರೀಮಂತಿಕೆಯ ಅವಶ್ಯಕತೆ ಸಮಾಜಕ್ಕೆ ಅವಶ್ಯಕವಾಗಿ ಬೇಕಾಗಿದೆ. ಮುಂದಿನ ವರ್ಷದಿಂದ ಶೇ 95.ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸುವ ಸಮುದಾಯದ ಮಕ್ಕಳನ್ನು ಪಂಚಮಸಾಲಿ ಮಠದವತಿಯಿಂದ ಒಂದು ವಾರ ಹರಿದ್ವಾರ ಹಾಗೂ ಋಷಕೇಶಗಳಿಗೆ ಉಚಿತ ಪ್ರವಾಸ ಕರೆದುಕೊಂಡು ಹೋಗುವ ಮೂಲಕ ಆಧ್ಯಾತ್ಮದ ಚಿಂತನೆಗಳನ್ನು ಬಿತ್ತುವ ಕೆಲಸ ಮಾಡುತ್ತೇವೆ ಎಂದರು.

ಪ್ರತಿನಿತ್ಯ ಎರಡು ನಿಮಿಷ ಧ್ಯಾನ ಮಾಡುವುದರಿಂದ ಬದುಕಿನಲ್ಲಿ ಸಾಕಷ್ಟು ಬದಲಾವಣೆ ತರಲು ಸಾಧ್ಯವಾಗುತ್ತದೆ. ಎಲ್ಲರಿಗೂ ಧ್ಯಾನ, ಯೋಗದ ಅವಶ್ಯಕತೆಯಿದೆ. ಎಲ್ಲರೂ ಬದುಕಿನಲ್ಲಿ ಖುಷಿಯನ್ನೆ ಬಯಸುತ್ತಾರೆ. ಕೆಲವರಿಗೆ ಅಧಿಕಾರ, ಶ್ರೀಮಂತಿಕೆ ಇರಬಹುದು ಅದರೆ, ಆರೋಗ್ಯವಿಲ್ಲದಿದ್ದರೆ ಅದೆಲ್ಲವೂ ಶೂನ್ಯವಾಗುತ್ತದೆ. ಖುಷಿ ಹಾಗೂ ದುಖಃ ಎರಡೂ ನಮ್ಮ ಕೈಯಲ್ಲಿಯೇ ಇವೆ. ಗೊಂದಲದಲ್ಲಿರುವ ಸಮುಧಾಯಕ್ಕೆ ಧ್ಯಾನ, ಯೋಗ ಹಾಗೂ ಸತ್ಕಾರ್ಯಗಳು ಪರಿಹಾರ ನೀಡುವ ಶಕ್ತಿಯನ್ನು ಹೊಂದಿವೆ ಎಂದರು.

ಈ ವೇಳೆ ಪಂಚಮಸಾಲಿ ಸಮಾಜದ ಜಿಲ್ಲಾ ಕಾರ್ಯದರ್ಶಿ ಧನುಶಂಕರ್ ಮಾತನಾಡಿ, ಸಾಧನೆ ಮಾಡಿರುವ ಸಮುದಾಯದ ಮಕ್ಕಳನ್ನು ಗುರುತಿಸಿ ಪ್ರೋತ್ಸಹಿಸುವ ಕೆಲಸವನ್ನು ಸಮಾಜ ಮಾಡುತ್ತಿದೆ. ಪಾಲಕರು ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡುವ ಕೆಲಸ ಮಾಡಬೇಕು. ರಾಜ್ಯಗಳನ್ನು ಕಟ್ಟಿ ಆಡಳಿತ ನಡೆಸಿದ ಭವ್ಯ ಇತಿಹಾಸ ಹೊಂದಿರುವ ಪಂಚಮಸಾಲಿ ಸಮುದಾಯದ ಇತಿಹಾಸ ಹಾಗೂ ಸಂಸ್ಕೃತಿಯನ್ನು ಮಕ್ಕಳಿಗೆ ಪರಿಚಯಿಸುವ ಕೆಲಸವಾಗಬೇಕು. ಶಿಕ್ಷಣವು ಬೌಧಿಕವಾಗಿ ಶ್ರೀಮಂತಗೊಳಿಸಿದರೆ, ಸಂಸ್ಕಾರವು ಉತ್ತಮ ವ್ಯಕ್ತಿತ್ವ ರೂಪಿಸುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಯಲ್ಲಿ ಹೆಚ್ಚು ಅಂಕಗಳಿಸಿದ ವಿಧ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಕಾಂಗ್ರೆಸ್ ಮುಖಂಡ ಬಿ.ಜಿ.ಅರುಣ್ ಕಾರ್ಯಕ್ರಮ ಉದ್ಘಾಟಿಸಿದರು. ಜಿಲ್ಲಾಧ್ಯಕ್ಷ ಶಿವಪ್ರಕಾಶ್, ತಾಲೂಕಾಧ್ಯಕ್ಷ ಬಿ.ಪಿ.ದಯಾನಂದ್, ಪುಷ್ಪಲತಾ, ಮೃತ್ಯುಂಜಯಪ್ಪ, ಎ.ಎಸ್.ಸಿದ್ದರಾಮೇಶ್, ಉಮಾ ರಮೇಶ್, ಎನ್.ಪ್ರಕಾಶ್ ಮತ್ತು ವೀರೇಶ್ ಸೇರಿದಂತೆ ಸಮುದಾಯದ ನೂರಾರು ಜನರಿದ್ದರು.

## ಫಾಸ್ಟ್ ನ್ಯೂಸ್

### ಕಚೇರಿ ಸಹಾಯಕರ ಹುದ್ದೆಗೆ ಅರ್ಜಿ ಆಹ್ವಾನ

» ಚಿತ್ರದುರ್ಗ

ಚಿತ್ರದುರ್ಗ ಜಿಲ್ಲಾ ಬಾಲಭವನದಲ್ಲಿ ಖಾಲಿ ಇರುವ ಕಚೇರಿ ಸಹಾಯಕರನ್ನು ಸಂಚಿತ ವೇತನದ (ಗೌರವಧನ) ಆಧಾರದ ಮೇಲೆ ತಾತ್ಕಾಲಿಕವಾಗಿ ಆಯ್ಕೆ ಮಾಡಿಕೊಳ್ಳಲು ಅರ್ಹ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಜುಲೈ 1 ರಿಂದ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಪ್ರಾರಂಭವಾಗಲಿದ್ದು, ಜುಲೈ 30 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದೆ.ಜಿಲ್ಲಾ ಬಾಲಭವನ ಕಚೇರಿಯಲ್ಲಿ ಕಛೇರಿ ಸಹಾಯಕರು–1 ಹುದ್ದೆ ಖಾಲಿ ಇದ್ದು, ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಕನಿಷ್ಠ ಪಿ.ಯು.ಸಿ ಮತ್ತು ಮೇಲ್ಪಟ್ಟ ವಿದ್ಯಾರ್ಹತೆಯೊಂದಿಗೆ ಕಡ್ಡಾಯವಾಗಿ ಕಂಪ್ಯೂಟರ್ ಜ್ಞಾನ ಹೊಂದಿರಬೇಕು. ಆಯ್ಕೆಯಾದ ಅಭ್ಯರ್ಥಿಗಳಿಗೆ ಮಾಹೆಯಾನ ಗೌರವಧನ ರೂ.10,000/– ನೀಡಲಾಗುವುದು. ಅರ್ಜಿಗಳನ್ನು ಜುಲೈ 30 ರಂದು ಸಂಜೆ 5 ಗಂಟೆಯ ಒಳಗಾಗಿ ಜಿಲ್ಲಾ ಬಾಲಭವನ ಕಚೇರಿಗೆ ಸಲ್ಲಿಸಬೇಕು. ನಂತರ ಬಂದಂತಹ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಷರತ್ತುಗಳು: ಗಣಕಯಂತ್ರದಲ್ಲಿ ಎಂಎಸ್ ಆಫೀಸ್ ಹಾಗೂ ಕನ್ನಡ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಪರಿಣಿತಿ ಹೊಂದಿರಬೇಕು. ಸರ್ಕಾರಿ ಅಥವಾ ಸ್ವಯಂ ಸೇವಾ ಸಂಸ್ಥೆಗಳಲ್ಲಿ ಕನಿಷ್ಠ 3 ವರ್ಷದ ಅನುಭವ ಹೊಂದಿರಬೇಕು. ಅರ್ಹ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಯು 18 ರಿಂದ 45 ವರ್ಷ ವಯೋಮಿತಿ ಹೊಂದಿರಬೇಕು. ನೇಮಕಗೊಂಡ ಅಭ್ಯರ್ಥಿಯು ಕಾಲ ಕಾಲಕ್ಕೆ ರಾಜ್ಯ ಬಾಲಭವನ ಸೊಸೈಟಿಯ ಕಾರ್ಯದರ್ಶಿಗಳು ನೀಡುವ ಸೂಚನೆ, ಮಾರ್ಗದರ್ಶನಗಳಂತೆ ಕಾರ್ಯನಿರ್ವಹಿಸಬೇಕು. ಈ ಹುದ್ದೆಯು ಗುತ್ತಿಗೆ ಆಧಾರದ ಮೇಲೆ ತಾತ್ಕಾಲಿಕವಾಗಿದ್ದು, ತಮ್ಮ ಸೇವೆಯು ತೃಪ್ತಿಕರವಾಗಿಲ್ಲವೆಂದು ಕಂಡುಬಂದಲ್ಲಿ ಯಾವುದೇ ಮುನ್ನೆಚ್ಚರಿಕೆ ಅಥವಾ ನೋಟೀಸ್ ನೀಡದೆ ತೆಗೆದು ಹಾಕುವ ಅಧಿಕಾರ ಜಿಲ್ಲಾಮಟ್ಟದ ಸಮಿತಿಗೆ ಇರುತ್ತದೆ. ಈ ಹುದ್ದೆಯು 11 ತಿಂಗಳಿಗೆ ಮಾತ್ರ ಚಾಲ್ತಿಯಲ್ಲಿರುತ್ತದೆ. ಅರ್ಜಿಯೊಂದಿಗೆ ಅಗತ್ಯ ದೃಢೀಕರಣ ಪತ್ರಗಳೊಂದಿಗೆ ಮುಚ್ಚಿದ ಲಕೋಟೆಯಲ್ಲಿ ಮುದ್ದಾಂ ಸಲ್ಲಿಸಬೇಕು. ಜಿಲ್ಲೆಯ ಅಭ್ಯರ್ಥಿಗಳಿಗೆ ಮಾತ್ರ ಅವಕಾಶ ಕಲ್ಪಿಸಿದ್ದು, ಆಯ್ಕೆಯಾದ ಅಭ್ಯರ್ಥಿಯು ಕೇಂದ್ರ ಸ್ಥಾನದಲ್ಲಿ ವಾಸಿಸುವುದು ಕಡ್ಡಾಯವಾಗಿದೆ. ಅರ್ಜಿ ಸಲ್ಲಿಸುವವರು ನಿಗಧಿತ ವಿದ್ಯಾರ್ಹತೆಯನ್ನು ಕಡ್ಡಾಯವಾಗಿ ಹೊಂದಿರಬೇಕು. ಅಭ್ಯರ್ಥಿಗಳನ್ನು ಮೆರಿಟ್ ಆಧಾರದ ಮೇಲೆ ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯ ಮೂಲಕ ಆಯ್ಕೆ ಮಾಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ನಗರದ ವೀರವನಿತೆ ಓಬವ್ವ ಕ್ರೀಡಾಂಗಣ ಹತ್ತಿರದ, ಜಿಲ್ಲಾ ಬಾಲಭವನ ಕಾರ್ಯಾಲಯದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕರ ಕಚೇರಿ ದೂರವಾಣಿ ಸಂಖ್ಯೆ 08194–235259, ಮೊಬೈಲ್ ನಂಬರ್ 7259551325 ಗೆ ಸಂಪರ್ಕಿಸಬಹುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ಭಾರತಿ ಆರ್ ಬಣಕಾರ್ ತಿಳಿಸಿದ್ದಾರೆ.

### ನ್ಯಾಯಾಂಗ ತರಬೇತಿ: ಅಲ್ಪಸಂಖ್ಯಾತ ಅಭ್ಯರ್ಥಿಗಳಿಂದ ಅರ್ಜಿ

» ಚಿತ್ರದುರ್ಗ

ಚಿತ್ರದುರ್ಗ ಜಿಲ್ಲೆಯಲ್ಲಿ ಮತೀಯ ಅಲ್ಪಸಂಖ್ಯಾತರಾದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಪಾರ್ಸಿ, ಬೌದ್ಧ ಮತ್ತು ಸಿಖ್ ವರ್ಗದ ಕಾನೂನು ಪದವಿಧರರನ್ನು ನ್ಯಾಯಾಂಗ ತರಬೇತಿ ಯೋಜನೆಯಡಿ 2024–25ನೇ ಸಾಲಿನಲ್ಲಿ 6 ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜುಲೈ 12 ಕೊನೆಯ ದಿನವಾಗಿದೆ. ಷರತ್ತುಗಳು: ಅಭ್ಯರ್ಥಿಯು ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಪಾರ್ಸಿ, ಬೌದ್ಧ ಮತ್ತು ಸಿಖ್ ಸಮುದಾಯಕ್ಕೆ ಸೇರಿದ್ದು, ಕರ್ನಾಟಕ ರಾಜ್ಯ ನಿವಾಸಿಯಾಗಿರಬೇಕು. ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ದಿನಾಂಕಕ್ಕೆ 2 ವರ್ಷದ ಒಳಗೆ ಅಭ್ಯರ್ಥಿಯು ಎಲ್‌ಎಲ್‌ಬಿ ಪದವಿ ಮುಗಿಸಿರಬೇಕು. ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಪಡೆದು ಸಲ್ಲಿಸಬೇಕು. ಅಭ್ಯರ್ಥಿಯು ಕುಟುಂಬದ ವಾರ್ಷಿಕ ಆದಾಯ 3.50ಲಕ್ಷ ಮೀರಿರಬಾರದು. ಈ ತರಬೇತಿಯು 4 ವರ್ಷಗಳಾಗಿದ್ದು, ತರಬೇತಿ ಅವಧಿಯಲ್ಲಿ ಮಾಸಿಕ ರೂ. 5000/ ಭತ್ಯೆ ನೀಡಲಾಗುವುದು. ಆಯ್ಕೆಯನ್ನು ಜಿಲ್ಲಾ ಆಯ್ಕೆ ಸಮಿತಿ ಮೂಲಕ ನಡೆಸಲಾಗುವುದು. ಅರ್ಜಿ ಸಲ್ಲಿಸುವ ಅಭ್ಯರ್ಥಿಯ ವಯಸ್ಸು ನಿಗದಿಪಡಿಸಿದ ದಿನಾಂಕಕ್ಕೆ ಕನಿಷ್ಠ 30 ವರ್ಷ ಮೀರಿರಬಾರದು. ಅಭ್ಯರ್ಥಿಯು ಬಾರ್ ಕೌನ್ಸಿಲ್‌ನಲ್ಲಿ ಹೆಸರು ನೊಂದಾಯಿಸಿರಬೇಕು. ಆಯ್ಕೆಯಾದ ಅಭ್ಯರ್ಥಿಗಳು ಸುಳ್ಳು ಜಾತಿ, ಆದಾಯ ಪ್ರಮಾಣ ಪತ್ರ ಅಥವಾ ಇತರೆ ಯಾವುದೇ ತಪ್ಪು ಮಾಹಿತಿಯನ್ನು ನೀಡಿ ಆಯ್ಕೆಯಾದ ಪಕ್ಷದಲ್ಲಿ ಅಂತವರನ್ನು ಶಿಕ್ಷೆಗೆ ಗುರಿಪಡಿಸುವುದಲ್ಲದೇ, ಶಿಷ್ಯ ವೇತನದ ಜೊತೆಗೆ ಶೇ.10ರ ಬಡ್ಡಿಯನ್ನು ಭೂ ಕಂದಾಯ ಬಾಕಿ ರೂಪದಲ್ಲಿ ಸರ್ಕಾರಕ್ಕೆ ಮರು ಪಾವತಿ ಮಾಡುವುದಾಗಿ ಹಾಗೂ ತರಬೇತಿಯನ್ನು ಮಧ್ಯದಲ್ಲಿ ಬಿಟ್ಟಲ್ಲಿ ಇಲಾಖೆಯಿಂದ ಪಡೆದ ಶಿಷ್ಯವೇತನವನ್ನು ಹಿಂತಿರುಗಿಸುವುದಾಗಿ ಮುಚ್ಚಳಿಕೆ ಬರೆದು ಕೊಡಬೇಕು. ಅಪೂರ್ಣ ಅವಧಿ ಮೀರಿದ ತಪ್ಪು ಮಾಹಿತಿ ಅಥವಾ ನಿಗದಿತ ದಿನಾಂಕದ ನಂತರ ಸ್ವೀಕರಿಸಲಾದ ಅರ್ಜಿಗಳನ್ನು ಯಾವುದೇ ಮುನ್ಸೂಚನೆ ನೀಡದೆ ತಿರಸ್ಕರಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಹಾಗೂ ನಿಗದಿತ ಅರ್ಜಿ ನಮೂನೆಗಳನ್ನು ಪಡೆಯಲು ನಗರದ ಸ್ಟೇಡಿಯಂ ರಸ್ತೆಯ ಶ್ರೀ ರಾಮ ಕಾಂಪ್ಲೆಕ್ಸ್‌ನ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿಗಳನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

========

# ವಯೋವೃದ್ಧರು, ನಿರಾಶ್ರಿತರು ಹಾಗೂ ಅನಾಥರಿಗೆ ಸರ್ಕಾರದ ನೆರವನ್ನು ತಲುಪಿಸಿ: ಟಿ.ರಘುಮೂರ್ತಿ

» ಚಳ್ಳಕೆರೆ

ತಾಲ್ಲೂಕಿನ ಅತಿಕಡುಬಡವರು, ನಿರಾಶ್ರಿತರು, ಅನಾಥರು ಹಾಗೂ ಕೂಲಿಕಾರ್ಮಿಕರು ಯಾವುದೇ ಆದಾಯವಿಲ್ಲದೆ ಕಡುಬಡತನದಲ್ಲಿ ಜೀವನ ನಿರ್ವಹಣೆ ಮಾಡುವವರು ಹಾಗೂ ಜೀವನದ ಸಂಧ್ಯಾಕಾಲದಲ್ಲಿ ಆಶ್ರಯವಿಲ್ಲದೆ ಪರಿತಪಿಸುವವರ ನೆರವಿಗೆ ರಾಜ್ಯ ಸರ್ಕಾರ ಸಾಮಾಜಿಕ ಭದ್ರತೆ ಯೋಜನೆಯಡಿ ಪಿಂಚಣಿಯನ್ನು ನೀಡುತ್ತಿದ್ದು, ಇದನ್ನು ಅರ್ಹರಿಗೆ ತಲುಪಿಸುವ ಜವಾಬ್ದಾರಿಯನ್ನು ತಾಲ್ಲೂಕು ಆಡಳಿತ ಮಾಡಬೇಕೆಂದು ಕ್ಷೇತ್ರದ ಶಾಸಕ, ಸಣ್ಣಕೈಗಾರಿಕೆ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಟಿ.ರಘುಮೂರ್ತಿ ತಿಳಿಸಿದರು.

ಅವರು, ಶನಿವಾರ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಪಿಂಚಣಿ ಆದಾಲತ್‌ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಸರ್ಕಾರದ ಈ ಯೋಜನೆ ಅರ್ಹರನ್ನು ಹುಡುಕಿಕೊಡುವ ಕೆಲಸವನ್ನು ಗ್ರಾಮ ಪಂಚಾಯಿತಿ




ಲೆಕ್ಕಾಧಿಕಾರಿಗಳು ಹಾಗೂ ಕಂದಾಯ ಅಧಿಕಾರಿಗಳು ಮಾಡಬೇಕಿದೆ. ಗ್ರಾಮೀಣ ಭಾಗದಲ್ಲೂ ಸಹ ನಿರಾಶ್ರಿತರಿದ್ದರೆ ಅವರ ಬಗ್ಗೆ ಮಾಹಿತಿ ಪಡೆದು ಅವರೂ ಈ ಯೋಜನೆ ವ್ಯಾಪ್ತಿಯಲ್ಲಿ ಸಹಾಯ ಪಡೆಯುವಂತೆ ಮಾಡಬೇಕೆಂದು ಸಾರ್ವಜನಿಕ ಮನವಿ ಮಾಡಿದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದ ಉಪವಿಭಾಗಾಧಿಕಾರಿ ಎಂ.ಕಾರ್ತಿಕ್, ಜಿಲ್ಲೆಯಾದ್ಯಂತ ಪಿಂಚಣಿ ಆದಾಲತ್ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿಗಳ ಮಾರ್ಗದರ್ಶನದಲ್ಲಿ ಉತ್ತಮವಾಗಿ ನಡೆಸಲಾಗುತ್ತಿದೆ. ಪಿಂಚಣಿ ಆದಾಲತ್‌ನ ಮೂಲ ಉದ್ದೇಶವೆಂದರೆ ವಯೋವೃದ್ಧರು, ನಿರ್ಗತಿಕರೂ ಸಹ ಸರ್ಕಾರದ ಸಹಾಯವನ್ನು ಪಡೆದು ತಮ್ಮ ಬದುಕನ್ನು ನೆಮ್ಮದಿ ಕಂಡುಕೊಳ್ಳಬೇಕೆಂಬ ಇಚ್ಚೆ ಸರ್ಕಾರದ್ದಾಗಿದೆ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ತಹಶೀಲ್ದಾರ್ ರೇಹಾನ್‌ಪಾಷ, ಪ್ರಸ್ತುತ ತಾಲ್ಲೂಕಿನಾದ್ಯಂತ 60358 ಜನರು ಈ ಪ್ರಯೋಜನವನ್ನು ಪಡೆಯುತ್ತಿದ್ದಾರೆ. ಸರ್ಕಾರದ ನಿಯಮದಂತೆ ಎಲ್ಲರಿಗೂ ಪ್ರತಿತಿಂಗಳು ತಪ್ಪದೆ ವೃದ್ದಾಪ್ಯವೇತನ, ಅಂಗವಿಕಲವೇತನ, ವಿಧವಾವೇತನ ನೀಡಲಾಗುತ್ತಿದೆ.ಈಗಾಗಲೇಸಂಬಂಧಪಟ್ಟ ಕಂದಾಯಾಧಿಕಾರಿ, ಗ್ರಾಮ ಲೆಕ್ಕಿಗರು ಸಮೀಕ್ಷೆ ನಡೆಸಿ ಸಾರ್ವಜನಿಕರ ಸಹಕಾರ ಪಡೆದು ಅರ್ಹರನ್ನು ಗುರುತಿಸಿದ್ದಾರೆ. ಅವರಿಗೆ ಕೂಡಲೇ ಮಂಜೂರಾತಿ ಆದೇಶ ನೀಡಿ ಪಿಂಚಣಿ ಅವರ ಖಾತೆಗೆ ಜಮಾವಾಗುವಂತೆ ನೋಡಿಕೊಳ್ಳಲಾಗಿದೆ ಎಂದರು. ಕಾರ್ಯಕ್ರಮದಲ್ಲಿ ನಗರಸಭಾ ಸದಸ್ಯರಾದ ಕೆ.ವೀರಭದ್ರಪ್ಪ, ಬಿ.ಟಿ.ರಮೇಶ್‌ಗೌಡ, ನಾಮಿನಿ ಸದಸ್ಯ ನೇತಾಜಿಪ್ರಸನ್ನ, ಡಿವೈಎಸ್ಪಿ ಟಿ.ಬಿ.ರಾಜಣ್ಣ, ಕಂದಾಯಾಧಿಕಾರಿ ಲಿಂಗೇಗೌಡ, ಗ್ರಾಮಲೆಕ್ಕಾಧಿಕಾರಿ ಪ್ರಕಾಶ್, ಡಿ.ಶ್ರೀನಿವಾಸ್ ಮುಂತಾದವರು ಉಪಸ್ಥಿತರಿದ್ದರು.

# ಸ್ಥಾನಮಾನಗಳು ಸಮಾಜ ಸೇವೆಗೆ ದೊರೆತ ಅವಕಾಶ: ರಾಜೇಶ್ವರಿ ಎನ್.ಹೆಗಡೆ

» ದಾವಣಗೆರೆ

ಸಾರ್ವಜನಿಕ ಜೀವನದಲ್ಲಿ ಸ್ಥಾನಮಾನಗಳು ಸಮಾಜ ಸೇವೆಗೆ ದೊರೆತ ಅವಕಾಶ ಎಂದು ಭಾವಿಸಿ, ಕರ್ತವ್ಯ ನಿರ್ವಹಿಸಿದಾಗ ಮಾತ್ರ ದೇಶದ ಅಭಿವೃದ್ಧಿಯಾಗಲು ಸಾಧ್ಯ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್.ಹೆಗಡೆ ಅಭಿಪ್ರಾಯಪಟ್ಟರು.

ಜಿಲ್ಲಾ ವಕೀಲರ ಸಂಘ, ದಾವಣಗೆರೆ ವತಿಯಿಂದ ಕರ್ನಾಟಕ ರಾಜ್ಯ ತಾಂಡ ಅಭಿವೃದ್ಧಿ ನಿಗಮದ ನೂತನ ಅಧ್ಯಕ್ಷರಾಗಿ ಅಧಿಕಾರ ವಹಿಸಕೊಂಡ ಹಿರಿಯ ವಕೀಲ ಎನ್.ಜಯದೇವನಾಯ್ಕರನ್ನು ಸನ್ಮಾನಿಸಲು ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಮುಖ್ಯಅತಿಥಿಗಳಾಗಿ ಮಾತನಾಡಿದರು.

ಯಾವುದೇ ವ್ಯಕ್ತಿ ಅಧಿಕಾರ ದೊರೆತಾಗ ಹೆಚ್ಚು ವಿನಯವಂತನಾಗಬೇಕು. ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸುವ ಮೂಲಕ ಜನರ ಕಷ್ಟಕಾರ್ಪಣ್ಯಗಳಿಗೆ ಸ್ಪಂದಿಸುವ ಹೃದಯವಂತಿಕೆಯನ್ನು ಹೊಂದಿದಾಗ ಮಾತ್ರ ಸ್ಥಾನಮಾನಗಳ ಜತೆ ವ್ಯಕ್ತಿಯ ವ್ಯಕ್ತಿತ್ವ ಬೆಳಗಲು ಸಾಧ್ಯ. ಸಾರ್ವಜನಿಕ ರಂಗದಲ್ಲಿ ನಿಸ್ವಾರ್ಥತೆಯಿಂದ ಪ್ರಾಮಾಣಿಕವಾಗಿ ಕೆಲಸ ಮಾಡುವವರ ಸಂಖ್ಯೆ ಕಡಿಮೆ ಆಗುತ್ತಿದ್ದು, ಈ ನಿಟ್ಟಿನಲ್ಲಿ ಇಂದು ಯುವ ಜನತೆಗೆ ಆದರ್ಶಗಳನ್ನು ಹೇಳಿಕೊಡುವ, ಆದರ್ಶವಾದ ವ್ಯಕ್ತಿತ್ವದ ಅವಶ್ಯಕತೆ ಇದೆ ಎಂದರು.ಅಭಿನಂದನೆ ಸ್ವೀಕರಿಸಿದ ಎನ್. ಜಯದೇವನಾಯ್ಕಮಾತನಾಡಿ,ರಾಜಕಾರಣದಲ್ಲಿ ಪ್ರಾಮಾಣಿಕತೆ, ಬದ್ಧತೆ ಮತ್ತು ತತ್ವ ಸಿದ್ಧಾಂತಗಳು ಕಣ್ಮರೆ ಆಗುತ್ತಿದ್ದು, ಜನತೆ ರಾಜಕೀಯದಿಂದ



ವಿಮುಖರಾಗುತ್ತಿದ್ದಾರೆ. ತಮಗೆ ದೊರೆತಿರುವ ಸ್ಥಾನಮಾನವನ್ನು ಶೋಷಿತ ಅಭಿವೃದ್ಧಿ ಮತ್ತು ಸಾರ್ವಜನಿಕರ ಒಳಿತಿಗಾಗಿ ಮೀಸಲಿಡುವುದಾಗಿ ಹೇಳಿದ ಅವರು, ಜಿಲ್ಲಾ ವಕೀಲರ ಸಂಘವು ನೀಡಿದ ಸನ್ಮಾನ ನನ್ನ ಜೀವನದ ಅವಿಸ್ಮರಣೀಯ ಕ್ಷಣ ಎಂದು ಬಣ್ಣಿಸಿದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್.ಅರುಣ್‌ಕುಮಾರ್ ಮಾತನಾಡಿ, ಜೂನ್ 28, 1972, ಡಾ.ಬಿ.ಆರ್. ಅಂಬೇಡ್ಕರ್ ವಕೀಲರಾದ ದಿನವಾಗಿದ್ದು, ಅವರ ಅಧ್ಯಕ್ಷತೆಯಲ್ಲಿ ರಚನೆಯಾದ ಸಂವಿಧಾನದ ಅಡಿಯಲ್ಲಿ ಎಲ್ಲಾ ಅಂಗಗಳು ಕಾರ್ಯ ನಿರ್ವಹಿಸುತ್ತಿವೆ. ಸಂವಿಧಾನ ಅಡಿಯಲ್ಲಿ ಸಾಮಾನ್ಯರೂ ದೇಶದ ಉನ್ನತ ಹುದ್ದೆಗಳನ್ನು ಅಲಂಕರಿಸುವ ಅವಕಾಶಗಳು ದೊರೆತಿವೆ. ಜಯದೇವನಾಯ್ಕರು ಸಂವಿಧಾನದ ಆದರ್ಶಗಳಿಗೆ ಅನುಗುಣವಾಗಿ ಸಾಮಾಜಿಕ ನ್ಯಾಯವನ್ನು ದೊರಕಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗುವ ಅಚಲವಾದ ನಂಬಿಕೆ ಇದೆ ಎಂದು ಅಭಿನಂದಿಸಿದರು.

ಸಮಾರಂಭದಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಮಹಾವೀರ ಮ. ಕರೆಣ್ಣವರ್, ಹಿರಿಯ ವಕೀಲರಾದ ಹೆಚ್. ಎನ್.ರಾಜಶೇಖರಪ್ಪ, ರಾಮಚಂದ್ರ ಕಲಾಲ್, ಡಿ.ಪಿ.ಬಸವರಾಜ್, ಎನ್.ಎಂ.ಆಂಜನೇಯ, ಮಲ್ಲೇಶ್ ನಾಯ್ಕ, ಟಿ.ಹೆಚ್.ಸಿದ್ದಪ್ಪ ಲೋಕಿಕೆರೆ, ತಿಪ್ಪೇಶ್ ರಾಥೋಡ್ ಮಾತನಾಡಿದರು.

ಈ ವೇಳೆ ಜಿಲ್ಲಾ ವಕೀಲರ ಸಂಘದ ಕಾರ್ಯದರ್ಶಿ ಎಸ್.ಬಸವರಾಜ್, ಉಪಾಧ್ಯಕ್ಷ ಜಿ.ಕೆ.ಬಸವರಾಜ್ ಗೋಪನಾಳು, ಕಾರ್ಯಕಾರಿ ಸಮಿತಿ ಸದಸ್ಯರಾದ ಕೆ.ಎಂ.ನೀಲಕಂಠಯ್ಯ, ಟಿ.ಹೆಚ್.ಮಧುಸೂಧನ್, ವಾಗೀಶ್ ಕಟ್ಟಿಗಿಹಳ್ಳಿ ಮಠ, ಎಂ.ಚೌಡಪ್ಪ, ಎಲ್.ನಾಗರಾಜ್ ಇತರರು ಇದ್ದರು.

## ಡಿಹೆಚ್‌ಒ ಕಚೇರಿ: ಸಭಾಭವನ ರೂಫಿಂಗ್ ಕಾಮಗಾರಿಗೆ ಚಾಲನೆ



» ಚಿತ್ರದುರ್ಗ

ಚಿತ್ರದುರ್ಗನಗರದಜಿಲ್ಲಾಆರೋಗ್ಯಮತ್ತುಕುಟುಂಬಕಲ್ಯಾಣಾಧಿಕಾರಿಗಳ ಕಚೇರಿ ಆವರಣದ ಕಟ್ಟಡದ ಮೇಲ್ಭಾಗದಲ್ಲಿ ಸಭಾಭವನ ರೂಫಿಂಗ್ ಕಾಮಗಾರಿಗೆ ಶಾಸಕ ಕೆ.ಸಿ.ವೀರೇಂದ್ರ ಪಪ್ಪಿ ಶನಿವಾರ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಜಿ.ಪಿ.ರೇಣುಪ್ರಸಾದ್, ಆರೋಗ್ಯ ಇಲಾಖೆಯ ಅಧಿಕಾರಿಗಳಾದ ಡಾ.ಅಭಿನವ್, ಡಾ.ನಾಗರಾಜ್, ಡಾ.ಚಂದ್ರಶೇಖರ್ ಕಾಂಬ್ಳಿಮಠ್, ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಬಿ.ವಿ.ಗಿರೀಶ್, ಸಹಾಯಕ ಆಡಳಿತಾಧಿಕಾರಿ ಗವಿಸಿದ್ದೇಶ್ವರ್ ಹಾಗೂ ಇಲಾಖೆಯ ಸಿಬ್ಬಂದಿ ಉಪಸ್ಥಿತರಿದ್ದರು.

## ಜಿಲ್ಲಾ ಕಾಂಗ್ರೆಸ್ ಪರಿಶಿಷ್ಟ ಪಂಗಡಗಳ ವಿಭಾಗದ ಅಧ್ಯಕ್ಷರಾಗಿ ಬಿ.ಮಂಜುನಾಥ್ ನೇಮಕ




ಚಿತ್ರದುರ್ಗ: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ರಾಜ್ಯಾಧ್ಯಕ್ಷ ಡಿ.ಕೆ.ಶಿವಕುಮಾರ್‌ರವರ ಆದೇಶದಂತೆ ಜಿಲ್ಲಾ ಕಾಂಗ್ರೆಸ್ ಪರಿಶಿಷ್ಟ ಪಂಗಡ ವಿಭಾಗದ ಅಧ್ಯಕ್ಷರಾಗಿ ನಗರದ ರೈಲ್ವೆ ಸ್ಟೇಷನ್ ಸಮೀಪದ ವಾಸಿ ಬಿ.ಮಂಜುನಾಥ್ ಇವರನ್ನು ನೇಮಕ ಮಾಡಲಾಗಿದೆ.ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಬಿ.ಮಂಜುನಾಥ್‌ಗೆ ನೇಮಕಾತಿ ಪತ್ರ ನೀಡಿದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಂ.ಕೆ.ತಾಜ್‌ಪೀರ್ ಜಿಲ್ಲೆಯಾದ್ಯಂತ ಸಂಚರಿಸಿ ಪರಿಶಿಷ್ಟ ಪಂಗಡ ವಿಭಾಗವನ್ನು ಸಂಘಟಿಸಿ ಪಕ್ಷಕ್ಕೆ ಶಕ್ತಿ ತುಂಬುವಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು. ಮುಂದೆ ನಡೆಯಲಿರುವ ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆಯಲ್ಲಿ ಪಕ್ಷದ ಗೆಲುವಿಗೆ ಶ್ರಮಿಸುವಂತೆ ತಿಳಿಸಿದರು.ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳಾದ ಕೆ.ಪಿ.ಸಂಪತ್‌ಕುಮಾರ್, ಡಿ.ಎನ್.ಮೈಲಾರಪ್ಪ, ಕಾಂಗ್ರೆಸ್ ಉಪಾಧ್ಯಕ್ಷ ಎಸ್.ಎನ್.ರವಿಕುಮಾರ್, ಬಸವರಾಜ್, ಚಾಂದ್‌ಪೀರ್ ಇನ್ನು ಅನೇಕರು ಈ ಸಂರ್ದದಲ್ಲಿದ್ದರು.

## ಮರುವಿನ್ಯಾಸಗೊಳಿಸಿದ ಹವಾಮಾನ ಆಧಾರಿತ ಬೆಳೆ ಯೋಜನೆ

ಚಿತ್ರದುರ್ಗ: 2024–25ನೇ ಸಾಲಿನಲ್ಲಿ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಯನ್ನು ಚಿತ್ರದುರ್ಗ ಜಿಲ್ಲೆಯಲ್ಲಿ ಬಹುವಾರ್ಷಿಕ ತೋಟಗಾರಿಕೆ ಬೆಳೆಗಳಾದ ಅಡಿಕೆ, ದಾಳಿಂಬೆ ಮತ್ತು ಮಾವು ಬೆಳೆಗಳಿಗೆ ಮರು ವಿನ್ಯಾಸಗೊಳಿಸಿ ಅನುಷ್ಠಾನಗೊಳಿಸಲಾಗಿದೆ. ಬೆಳೆ ವಿಮೆ ನೊಂದಣಿಗೆ ಜುಲೈ 31 ಕೊನೆಯ ದಿನವಾಗಿದೆ. ಹವಾಮಾನ ಅಂಶಗಳಾದ ತಾಪಮಾನ, ಗಾಳಿಯ ವೇಗ, ಮಳೆಯ ಪ್ರಮಾಣ, ಆರ್ದ್ರತೆ ಇತ್ಯಾದಿ ಮಾಹಿತಿಗಳನ್ನು ಸ್ಥಳೀಯವಾಗಿ ಲಭ್ಯವಿರುವ ಟೆಲಿಮೆಟ್ರಿಕ್ ಮಳೆ ಮಾಪನ ಕೇಂದ್ರಗಳಲ್ಲಿ ದಾಖಲಿಸುವ ಅಂಶಗಳ ಆಧಾರದ ಮೇಲೆ ಬೆಳೆ ವಿಮಾ ನಷ್ಟವನ್ನು ತೀರ್ಮಾನಿಸಲಾಗುವುದು. ಮಾವು ಬೆಳೆಗೆ ಪ್ರತಿ ಹೆಕ್ಟೇರ್‌ಗೆ ರೂ.80000/– ವಿಮಾ ಮೊತ್ತ ನೀಡಲಾಗುವುದು. ರೈತರು 5 ಕಂತುಗಳಲ್ಲಿ ಪಾವತಿಸಬೇಕಾದ ವಿಮಾ ಮೊತ್ತ ರೂ.4000, ದಾಳಿಂಬೆ ಬೆಳೆಗೆ ಪ್ರತಿ ಹೆಕ್ಟೇರ್‌ಗೆ ರೂ.127000/– ನೀಡಲಾಗುವುದು, ರೈತರು 5 ಕಂತುಗಳಲ್ಲಿ ಪಾವತಿಸಬೇಕಾದ ವಿಮಾ ಮೊತ್ತ ರೂ.6350/– ಹಾಗೂ ಅಡಿಕೆ ಬೆಳೆಗೆ ಪ್ರತಿ ಹೆಕ್ಟೇರ್‌ಗೆ ರೂ.128000/– ರೈತರು 5 ಕಂತುಗಳಲ್ಲಿ ರೂ.6400/– ಬೆಳೆಗಳ ವಿಮೆಯನ್ನು ಬ್ಯಾಂಕ್‌ಗಳಲ್ಲಿ, ಸಾಮಾನ್ಯ ಸೇವಾ ಕೇಂದ್ರ ಆರ್ಥಿಕ ಸಂಸ್ಥೆಗಳಲ್ಲಿ ನೊಂದಣಿ ಮಾಡಬಹುದು.

## ಪ್ರಮುಖ ಸುದ್ದಿ

### ಕೇಂದ್ರ ಸರ್ಕಾರ ಅಪ್ಪರ್ ಭದ್ರಾ ಯೋಜನೆಗೆ ಹಣ ನೀಡುವ ವಿಚಾರ

# 5300 ಕೋಟಿ ಬಿಡುಗಡೆಯಾಗುತ್ತದೆ: ಸಂಸದ ಕಾರಜೋಳ

» ಚಿತ್ರದುರ್ಗ

ಕೇಂದ್ರ ಸರ್ಕಾರ ಅಪ್ಪರ್ ಭದ್ರಾ ಯೋಜನೆಗೆ ಹಣ ನೀಡುವ ವಿಚಾರದಲ್ಲಿ, ಕಳೆದ ಬಜೆಟ್‌ನಲ್ಲಿ ಘೋಷಿಸಿದಂತೆ 5300 ಕೋಟಿ ಬಿಡುಗಡೆಯಾಗುತ್ತದೆ ಎಂದು ಕೇಂದ್ರದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಭರವಸೆ ನೀಡಿದ್ದಾರೆಂದು ಸಂಸದ ಗೋವಿಂದ ಕಾರಜೋಳ ತಿಳಿಸಿದ್ದಾರೆ.

ಚಿತ್ರದುರ್ಗದ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತಾಡಿದ ಅವರು. ಚಿತ್ರದುರ್ಗದ ಈ ಭಾಗಕ್ಕೆ ಅಪ್ಪರ್ ಭದ್ರಾ ಯೋಜನೆ ಅತೀ ಅವಶ್ಯಕವಾಗಿದೆ. ಯೋಜನೆ ಜಾರಿಯಾಗುವುದರಿಂದ ಲಕ್ಷಾಂತರ ಭೂಮಿ ನೀರಾವರಿ ಯಾಗಲಿದೆ. ಇದುವರೆಗೂ ರಾಜ್ಯ ಸರ್ಕಾರ ಈ ಯೋಜನೆಗೆ ಇದುವರೆಗೂ ಖರ್ಚು ಮಾಡಿರುವ ಬಗ್ಗೆ, ಕೇಂದ್ರದ ಜಲಶಕ್ತಿ ಕೇಂದ್ರಕ್ಕೆ ರಾಜ್ಯದ ನೀರಾವರಿ ಇಲಾಖೆ ಅಧಿಕಾರಿಗಳಿಂದ ವರದಿ ಪಡೆದು ಸಂಪೂರ್ಣ ಮಾಹಿತಿ ಯನ್ನು ಕೊಟ್ಟರೆ , ಆಗ ಹಣ ಬಿಡುಗಡೆಯಾಗಲಿದೆ ಎಂದು



ದೆಹಲಿಯ ಸಂಸದರ ಸಭೆಯಲ್ಲಿ ಕೇಂದ್ರ ಹಣಕಾಸು ಸಚಿವೆ ಮಾಹಿತಿ ನೀಡಿದ್ದಾರೆ. ಇದರ ಬಗ್ಗೆ ರಾಜ್ಯ ಸರ್ಕಾರ ಗಮನ ಹರಿಸುವಂತೆ ಆ ಸಭೆಯಲ್ಲಿ ಸಿಎಂಗೆ ಮನವಿ ಮಾಡಲಾಯಿತು.

**ಕೇಂದ್ರೀಯ ವಿದ್ಯಾಲಯ:** ರಾಜ್ಯದ ಹಲವೆಡೆಗಳಲ್ಲಿ ಕೇಂದ್ರ ಸರ್ಕಾರ ಕೇಂದ್ರೀಯ ವಿದ್ಯಾಲಯಗಳನ್ನು ತೆರೆದಿದೆ. ಆದರೆ ಚಿತ್ರದುರ್ಗದಲ್ಲಿ ಇಲ್ಲ. ಇಲ್ಲಿಗೂ ಸಹ ಕೇಂದ್ರೀಯ ವಿದ್ಯಾಲಯ ತೆರೆಯುವಂತೆ ಕೇಂದ್ರದ ಸಚಿವ ಧರ್ಮೇಂದ್ರ ಕುಮಾರ್ ಗೆ ಮನವಿ ಮಾಡಲಾಗಿದೆ. ಈ ಕೇಂದ್ರ ಪ್ರಾರಂಭವಾಗುವುದರಿಂದ ಬಡ ಮಕ್ಕಳಿಗೆ ಶಿಕ್ಷಣದ ಜೊತೆಗೆ ವಸತಿ ಸೌಲಭ್ಯ ಸಿಗಲಿದೆ. ಚಿತ್ರದುರ್ಗದಲ್ಲಿ ವಿದ್ಯಾಲಯ ಸ್ಥಾಪನೆ ಬಗ್ಗೆ ಸಚಿವರು ಸಕಾರಾತ್ಮಕ ಸ್ಪಂದನೆ ನೀಡಿದ್ದಾರೆ ಎಂದರು.

**ರೈಲು ನಿಲುಗಡೆಗೆ ಮನವಿ:** ಚಿತ್ರದುರ್ಗ ರೈಲ್ವೇ ನಿಲ್ದಾಣದಲ್ಲಿ ಹಲವು ರೈಲುಗಳು ಸಂಚರಿಸುತ್ತಿದ್ದು, ಮತ್ತಷ್ಟು ರೈಲುಗಳ ನಿಲುಗಡೆಯಾಗಬೇಕೆಂದು ಪ್ರಯಾಣಿಕರು ಬಯಸಿದ ಹಿನ್ನೆಲೆಯಲ್ಲಿ, ವಾಸ್ಕೋಡಿಗಾಮ ಯಶವಂತ ಪುರ, ಬೆಳಗಾವಿ ವಾಸ್ಕೋಡಿಗಾಮ, ವಿಶ್ವಮಾನವ, ಚಾಲುಕ್ಯ, ಗೋಲುಗುಮ್ಮಟ, ಸೇರಿಂದತೆ ಇತರೇ ರೈಲುಗಳನ್ನು ನಿಲ್ಲಿಸುವಂತೆ ರೈಲ್ವೇ ಸಚಿವ ಅಶ್ವೀನ್ ಹಾಗೂ ಸೋಮಣ್ಣ ಅವರಲ್ಲಿ ಮನವಿ ಮಾಡಲಾಗಿದೆ ಎಂದ ಸಂಸದರು, ಚಿತ್ರಮರ್ಗ ಲೋಕಸಭಾ ಕ್ಷೇತ್ರದ ಅಭಿವೃದ್ಧಿ ಗಾಗಿ, ಕೇಂದ್ರ ಸಚಿವರುಗಳನ್ನು ಭೇಟಿ ಮಾಡಿ ಮನವಿ ಮಾಡಲಾಗುತ್ತಿದೆ. ಕೇಂದ್ರದ ಕೆಲವು ಯೋಜನೆಗಳು ನೇರವಾಗಿ ಬರುತ್ತವೆ. ಮತ್ತೆ ಕೆಲವು ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ ಬರುತ್ತವೆ. ರೈಲ್ವೇ ಯೋಜನೆಗೆ ಸಂಬಂಧಿಸಿದಂತೆ ರಾಜ್ಯದ ಸರ್ಕಾರ ಶೇ. 80 ರಷ್ಟು ಭೂಮಿ ವಶಪಡಿಸಿಕೊಳ್ಳಬೇಕು. ಹಾಗೂ ಯೋಜನೆಯ ಶೇ.50ರಷ್ಟು ಹಣವನ್ನು ನೀಡಿದರೆ, ಆಗ ಯೋಜನೆ ಕಾರ್ಯಗತವಾಗಲು ಸಾಧ್ಯ ಎಂದರು.

ದಾವಣಗೆರೆ ಮತ್ತು ತುಮಕೂರು ರೈಲ್ವೇ ಯೋಜನೆಗೆ ಸಂಬಂಧಿಸಿದಂತೆ ಮುಂದಿನ ದಿನಗಳಲ್ಲಿ ಅಧಿಕಾರಿಗಳ ಸಭೆ ಕರೆದು, ಯೋಜನೆ ಯಾವ ಸ್ಥಿತಿಯಲ್ಲಿದೆ ಎಂದು ಮಾಹಿತಿ ಪಡೆದು, ಖುದ್ದು ಸ್ಥಳ ಪರಿಶೀಲನೆ ಮಾಡಲಾಗುವುದು ಎಂದರು.

ಈ ಸಮಯದಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಎ. ಮುರುಳಿ ಮಾಜಿ ಶಾಸಕ ತಿಪ್ಪಾರೆಡ್ಡಿ, ಪ್ರಧಾನ ಕಾರ್ಯದರ್ಶಿ ಸಂಪತ್ ಕುಮಾರ್, ಮಾಧುರಿ ಗಿರೀಶ್, ಸುರೇಶ್ ಸಿದ್ದಾಪುರ, ರೈತ ಮೋರ್ಚಾದ ಅಧ್ಯಕ್ಷ ವೆಂಕಟೇಶ್ ಯಾದವ್, ವಕ್ತಾರ ನಾಗರಾಜ್ ಬೇದ್ರೆ, ದಗ್ಗೆ ಶಿವಪ್ರಕಾಶ್, ಮಂಡಲ ಅಧ್ಯಕ್ಷ ನವೀನ್ ಚಾಲುಕ್ಯ ಸೇರಿದಂತೆ ಇತರರು ಭಾಗವಹಿಸಿದ್ದರು.

## ಫಾಸ್ಟ್ ನ್ಯೂಸ್

### ವಿದ್ಯಾರ್ಥಿ ನಿಲಯ ಪ್ರವೇಶಕ್ಕೆ ಅರ್ಜಿ ಆಹ್ವಾನ

» **ಚಿತ್ರದುರ್ಗ**

2024-25ನೇ ಸಾಲಿನ ಪಿಯುಸಿ ನಂತರದ ವಿವಿಧ ಕೋರ್ಸುಗಳಲ್ಲಿ ಹಾಗೂ ಪದವಿಗಳಲ್ಲಿ ವ್ಯಾಸಾಂಗ ಮಾಡುತ್ತಿರುವ ಮೆಟ್ರಿಕ್ ನಂತರದ ಬಾಲಕ, ಬಾಲಕಿಯರ ವಿದ್ಯಾರ್ಥಿ ನಿಲಯಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜುಲೈ 15 ಕೊನೆಯ ದಿನಾಂಕವಾಗಿದೆ. ವಿದ್ಯಾರ್ಥಿಗಳು ಎಸ್.ಹೆಚ್.ಪಿ ಪೋರ್ಟಲ್ ಜಾಲಾತಾಣ ತಿತಿತಿ.ಣತಿ.ಇಚಿಡಿ.ಟುಥಿ ನಲ್ಲಿ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ತಾಂತ್ರಿಕ ದೋಷಗಳು ಉಂಟಾದಲ್ಲಿ ನೇರವಾಗಿ ಸಂಬಂಧಿಸಿದ ಮೇಲ್ವಿಚಾರಕರು ಅಥವಾ ಅಗತ್ಯ ಪೂರಕ ಎಲ್ಲಾ ದಾಖಲೆಗಳೊಂದಿಗೆ ಚಿತ್ರದುರ್ಗ ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿಯನ್ನು ಸಂಪರ್ಕಿಸಬಹುದು.ಹೆಚ್ಚಿನ ಮಾಹಿತಿಗಾಗಿ ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ ದೂರವಾಣಿ ಸಂಖ್ಯೆ 08194-226659 ಗೆ ಸಂಪರ್ಕಿಸಬಹುದು ಎಂದು ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ತಿಳಿಸಿದ್ದಾರೆ.

### ವಿದ್ಯಾರ್ಥಿನಿಲಯ ಪ್ರವೇಶಕ್ಕೆ ಅರ್ಜಿ ಆಹ್ವಾನ

» **ಚಿತ್ರದುರ್ಗ**

2024-25ನೇ ಶೈಕ್ಷಣಿಕ ಸಾಲಿಗೆ ಹೊಸದುರ್ಗ ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ಡಾ. ಬಿ.ಆರ್.ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಹಾಗೂ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಪ್ರವೇಶ ಬಯಸುವ ವಿದ್ಯಾರ್ಥಿಗಳು ಜೂನ್ 30 ರೊಳಗೆ ಆನ್‌ಲೈನ್ ತಿ.ಇಚಿಡಿ.ಟುಥಿ.ಏಟ ಹಾಗೂ ಮ್ಯಾನ್ಯುಯಲ್ ಮೂಲಕ ಅರ್ಜಿ ಸಲ್ಲಿಸಬಹುದು ಎಂದು ಹೊಸದುರ್ಗ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ (ಗ್ರೇಡ್-2) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ರಾಜ್ಯ ಮಾನವ ಹಕ್ಕುಗಳ ಆಯೋಗದ ಸದಸ್ಯರ ಪ್ರವಾಸ

» **ಚಿತ್ರದುರ್ಗ**

ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ನ್ಯಾಯಾಂಗ ಸದಸ್ಯರಾದ ಎಸ್.ಕೆ. ವಂಟಿಗೋಡಿ ಅವರು ಜುಲೈ 01 ರಂದು ಚಿತ್ರದುರ್ಗ ಜಿಲ್ಲೆಗೆ ಆಗಮಿಸಲಿದ್ದಾರೆ. ಎಸ್.ಕೆ.ವಂಟಿಗೋಡಿ ಅವರು ಅಂದು ಮಧ್ಯಾಹ್ನ 01.30 ಗಂಟೆಗೆ ಚಿತ್ರದುರ್ಗ ನಗರದ ಪ್ರವಾಸಿ ಮಂದಿರಕ್ಕೆ ಆಗಮಿಸುವರು, ಬಳಿಕ ಸ್ಥಳೀಯ ವಿವಿಧ ಹಾಸ್ಟೆಲ್‌ಗಳಿಗೆ ಭೇಟಿ ನೀಡುವರು. ಅದೇ ದಿನ ಸಂಜೆ 7 ಗಂಟೆಗೆ ಬೆಂಗಳೂರಿಗೆ ಪ್ರಯಾಣ ಬೆಳೆಸುವರು ಎಂದು ಆಯೋಗದ ಸದಸ್ಯರ ಆಪ್ತ ಕಾರ್ಯದರ್ಶಿ ತಿಳಿಸಿದ್ದಾರೆ.

### ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ ಪ್ರವೇಶಕ್ಕೆ ಅರ್ಜಿ

» **ಚಿತ್ರದುರ್ಗ**

ಚಿತ್ರದುರ್ಗಜಿಲ್ಲೆಯಲ್ಲಿಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ (ಪಿಯುಸಿ ಮತ್ತು ಪಿಯು ಸಮಾನಾಂತರ ಕೋರ್ಸಿನ ವಿದ್ಯಾರ್ಥಿಗಳಿಗೆ ಮಾತ್ರ) 2024-25ನೇ ಸಾಲಿಗೆ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ-1, 2ಎ, 2ಬಿ, 3ಎ, 3ಬಿ, ಪ.ಜಾತಿ, ಪ.ವರ್ಗ, ಮತ್ತು ಇತರೆ ಜನಾಂಗಗಳಿಗೆ ಸೇರಿದ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜುಲೈ 20 ಕೊನೆಯ ದಿನಾಂಕವಾಗಿದೆ. ವಿದ್ಯಾರ್ಥಿಗಳು https://shp.karnataka.gov.in/bcwd ಜಾಲತಾಣದ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಪ್ರವರ್ಗ-1, ಎಸ್.ಸಿ. ಮತ್ತು ಎಸ್.ಟಿ ವರ್ಗದ ವಾರ್ಷಿಕ ಆದಾಯ 2.50 ಲಕ್ಷ, ಹಾಗೂ ಪ್ರವರ್ಗ-2ಎ, 2ಬಿ,3ಎ, 3ಬಿ, ಇತರೆ ಹಿಂದುಳಿದ ವರ್ಗಗಳ ವಾರ್ಷಿಕ ಆದಾಯ ರೂ. 1 ಲಕ್ಷ ಮೀರಿರಬಾರದು.ತಾಲ್ಲೂಕುವಾರು ವಿದ್ಯಾರ್ಥಿನಿಲಯಗಳ ವಿವರ ಹಾಗೂ ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕೆ ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳ ವಿವರ ಮತ್ತು ಸರ್ಕಾರದ ಆದೇಶಕ್ಕಾಗಿ ಇಲಾಖೆಯ ವೆಬ್‌ಸೈಟ್ https://bcwd.karnataka.gov.in/ ನ್ನು ಪರಿಶೀಲಿಸಬಹುದು. ಅರ್ಜಿ ಸಲ್ಲಿಸಲು ತಾಂತ್ರಿಕ ದೋಷಗಳು ಉಂಟಾದಲ್ಲಿ bcwdhelpline@gmail.com ಇ-ಮೇಲ್ ಮುಖಾಂತರ ಅಥವಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ, ತಾಲ್ಲೂಕು ಅಧಿಕಾರಿಗಳನ್ನು ಅಗತ್ಯ ದಾಖಲೆಗಳೊಂದಿಗೆ ಸಂಪರ್ಕಿಸಲು ಸೂಚಿಸಿದೆ. ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ದೂರವಾಣಿ ಸಂಖ್ಯೆ 8050770004, 8050770005 ಗೆ ಸಂಪರ್ಕಿಸಬಹುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪ್ರಕೃತಿಯನ್ನು ಪ್ರೀತಿಸಿ, ಗೌರವಿಸಿ ಸಂರಕ್ಷಿಸಬೇಕು

» **ಚಿತ್ರದುರ್ಗ**

ಪ್ರಕೃತಿಯ ಮಡಿಲಲ್ಲಿ ಗಾಳಿ, ನೀರು, ಭೂಮಿ, ಆಕಾಶದ ಸಂಬಂಧದೊಂದಿಗೆ ನಾವು ಬದುಕುತ್ತಿದ್ದೇವೆ ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಪ್ರಕೃತಿಯನ್ನು ಪ್ರೀತಿಸಿ, ಗೌರವಿಸಿ ಸಂರಕ್ಷಿಸಬೇಕು ಜೊತೆಗೆ ಆಯುರ್ವೇದ ವನ ನಿರ್ಮಾಣ ಮಾಡುತ್ತಿರುವುದು ಅತ್ಯಂತ ಶ್ಲಾಘನೀಯ ಮತ್ತು ಆರೋಗ್ಯಪೂರ್ಣ ಶ್ರೇಷ್ಠವಾದ ಕೆಲಸ ಎಂದು ಅಪರ ಜಿಲ್ಲಾಧಿಕಾರಿ ಬಿ.ಟಿ. ಕುಮಾರಸ್ವಾಮಿ ಹೇಳಿದರು.

ಅವರು ನಗರಸಭೆ ಚಿತ್ರದುರ್ಗ, ಅರಣ್ಯ ಇಲಾಖೆ, ಋಷಿಸಂಸ್ಕೃತಿ ಗುರುಕುಲ ಮಹಾಸಂಸ್ಥಾನ, ಪರಿಸರ ಮತ್ತು ವನ್ಯಜೀವಿ ಸಂರಕ್ಷಣಾ ವೇದಿಕೆ, ಶ್ರೀವಿದ್ಯಾಗಣಪತಿ ಸೇವಾ ಸಮಿತಿ ಸಿದ್ದಾರ್ಥ ಬಡಾವಣೆ, ಅಮೃತ ಆಯುರ್ವೇದ ಕಾಲೇಜು ಆಶ್ರಯದಲ್ಲಿ ಸಿದ್ದಾರ್ಥ ಬಡಾವಣೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ಪರಿಸರ ದಿನಾಚರಣೆ ಅಂಗವಾಗಿ ಆಯುರ್ವೇದ ವನಕ್ಕೆ ಗಿಡ ನೆಡುವ ಮೂಲಕ ಚಾಲನೆ ನೀಡಿ ಮತ್ತು ಧನ್ವಂತರಿ ದೇವತೆಗೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು.

ಕೋವಿಡ್ ಬಂದ ಭೀಕರ ಸಂದರ್ಭದಲ್ಲಿ ಜನರಿಗೆ ನಿಜವಾಗಿಯೂ ಆಕ್ಸಿಜನ್ ಬೆಲೆ ಗೊತ್ತಾಗಿದ್ದು, ಅಲ್ಲಿವರೆಗೂ ಆಕ್ಸಿಜನ್ ಎಂದರೆ ಗಾಳಿ ಎಂದಷ್ಟೇ ತಿಳಿಸಿದ್ದೆವು,




ಹಿಂದೆ ನಮ್ಮ ಪೂರ್ವಿಕರು ಒಂದು ಮರ ಕಡಿದರೆ ಮತ್ತೊಂದನ್ನು ನೆಡುತ್ತಿದ್ದರು. ಇದನ್ನು ನಾವೆಲ್ಲರೂ ಮಾಡಬೇಕು. ಸರ್ಕಾರ ಕಾಡು ಬೆಳೆಸಲು ಎಲ್ಲಾ ಪ್ರಯತ್ನ ಮಾಡುತ್ತದೆ. ಯಾರೇ ಆಗಲಿ ಪರಿಸರ ಉಳಿಸುವ ಒಳ್ಳೆಯ ಕೆಲಸ ಮಾಡಿದರೆ ಅದಕ್ಕೆ ಬೆಂಬಲ ನೀಡಬೇಕು ಎಂದರು.

ಕಾಡು ಬೆಳೆದರೆ ನಾಡು ಬೆಳೆಯುತ್ತದೆ ಜೊತೆಗೆಪ್ರತಿಗಿಡಗಳುಕೂಡಆಯುರ್ವೇದ ಗುಣಗಳನ್ನು ಹೊಂದಿರುತ್ತವೆ ಚಿತ್ರದುರ್ಗ ಎಂಬಮಧ್ಯಕರ್ನಾಟಕದಲ್ಲಿಆಯುರ್ವೇದ ವನ ನಿರ್ಮಾಣ ಮಾಡುವ ಮಹತ್ವದ ಸಂಕಲ್ಪ ಮತ್ತು ಗುರಿ ಹೊಂದಿರುವುದು ಮತ್ತು ಆಯುರ್ವೇದ ಶಿಕ್ಷಣ ಕಲಿಯುವ ವಿದ್ಯಾರ್ಥಿಗಳಿಗೆ ಇದೊಂದು ಉಪಯುಕ್ತ ಸಸ್ಯಕ್ಷೇತ್ರವಾಗಲಿ ಋಷಿಸಂಸ್ಕೃತಿ ಗುರುಕುಲ ಮಹಾಸಂಸ್ಥಾನದ ನೇತೃತ್ವದಲ್ಲಿ ಆಯುರ್ವೇದ ವನ ನಿರ್ಮಾಣ ಮಾಡುತ್ತಿರುವುದು ಅತ್ಯಂತ ಶ್ಲಾಘನೀಯ ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷರಾದ ಸೌಭಾಗ್ಯ ಬಸವರಾಜನ್ ಮಾತನಾಡಿ, ಚಿತ್ರದುರ್ಗ ನಗರದಲ್ಲಿ ಅದೆಷ್ಟೋ ಪಾರ್ಕ್‌ಗಳಿವೆ ಆದರೆ ಉಪಯುಕ್ತವಾಗುವುದು ಮುಖ್ಯ, ಪ್ರಸ್ತುತ ಆರೋಗ್ಯ ಬಹಳ ಮುಖ್ಯ, ಕೇವಲ ಜೂನ್ ತಿಂಗಳಲ್ಲಿ ಪರಿಸರ ದಿನಾಚರಣೆ ಮಾಡುವ ಬದಲು ಹೀಗೆ ಉದ್ಯಾನವನ್ನು ಆಯುರ್ವೇದ ಕ್ಷೇತ್ರವನ್ನಾಗಿ ಮಾಡುವುದು ಮುಖ್ಯ. ಅರಣ್ಯ ಇಲಾಖೆ ಮತ್ತು ಆಯುಷ್ ಹಾಗೂ ಎಲ್ಲರ ಸಹಕಾರದೊಂದಿಗೆ ಎಲ್ಲಾ ಬಗೆಯ ಆಯುರ್ವೇ ಗಿಡಗಳನ್ನು ಬೆಳೆಸಿ ಎಂದರು.

ಸರ್ಕಾರ ಈ ವರ್ಷ 5 ಕೋಟಿ ಗಿಡಗಳನ್ನು ಬೆಳೆಸಲು ಸರ್ಕಾರ ತೀರ್ಮಾನಿಸಿರುವುದು ಮಹತ್ವದ ಕಾರ್ಯ ಆದರೆಸರ್ಕಾರದೊಂದಿಗೆಸಾರ್ವಜನಿಕರೂ ಕೈ ಜೋಡಿಸಿದಾಗ ಮಾತ್ರ ಯೋಜನೆಗಳು ಯಶಸ್ವಿಯಾಗುತ್ತದೆ ಈ ಹಿನ್ನೆಲೆಯಲ್ಲಿ ನಿಮ್ಮ ಪರಿಸರ ಮತ್ತು ವನ್ಯಜೀವಿ ಸಂರಕ್ಷಣಾ ವೇದಿಕೆ ಮತ್ತು ಋಷಿಸಂಸ್ಕೃತಿ ಗುರುಕುಲ ಮಹಾಸಂಸ್ಥಾನದಿಂದ ಜಿಲ್ಲಾದ್ಯಂತ ಹಸಿರು ಬೆಳೆಸಲು ಎಲ್ಲಾ ಪ್ರಯತ್ನ ಮಾಡಿ ಎಂದು ಸಲಹೆನೀಡಿದರು.

ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿ ರಾಜಣ್ಣ, ಪರಿಸರ ಮತ್ತು ವನ್ಯಜೀವಿ ಸಂರಕ್ಷಣಾ ವೇದಿಕೆ ರಾಜ್ಯ ಉಪಾಧ್ಯಕ್ಷರಾದ ಡಾ. ಎಂ.ಸಿ ನರಹರಿ ಋಷಿಸಂಸ್ಕೃತಿ ಗುರುಕುಲ ಮಹಾಸಂಸ್ಥಾನದ ಆಡಳಿತಾಧಿಕಾರಿ ಮಾಲತೇಶ್ ಅರಸ್, ಪರಿಸರ ಮತ್ತು ವನ್ಯಜೀವಿ ಸಂರಕ್ಷಣಾ ವೇದಿಕೆ. ರಾಜ್ಯ ಸಂಚಾಲಕರಾದ ಟಿ. ರುದ್ರಮುನಿ ಮಾತನಾಡಿದರು. ನಗರಸಭೆ ಸದಸ್ಯರಾದ ಜಯಣ್ಣ ಅಧ್ಯಕ್ಷತೆಯನ್ನು ವಹಿಸಲಿದ್ದರು. ಸಿದ್ದಾರ್ಥ ಬಡಾವಣೆಯ ಶ್ರೀ ವಿದ್ಯಾಗಣಪತಿ ಸೇವಾ ಸಮಿತಿ ಅಧ್ಯಕ್ಷರಾದ ದುರ್ಗೇಶ್, ಸಿದ್ದಾರ್ಥ ಬಡಾವಣೆ ಕ್ಷೇಮಾಭಿವೃದ್ಧಿ ಸಂಘ ಸಂಚಾಲಕರಾದ ನಿವೃತ್ತ ಪೊಲೀಸ್ ಅಧಿಕಾರಿ ಬಸವರಾಜ್, ಅಮೃತ ಆಯುರ್ವೇದ ಕಾಲೇಜಿನ ಉಪನ್ಯಾಸಕ ಡಾ.ನವೀನ್ ಸಜ್ಜನ್, ನಗರಸಭೆ ಪರಿಸರ ಇಂಜಿನಿಯರ್ ನಾಗರಾಜ್, ಅರಣ್ಯ ಅಧಿಕಾರಿ ಉಷಾರಾಣಿ ಹಾಗೂ ಅಮೃತ ಆಯುರ್ವೇದ ಕಾಲೇಜಿನ ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಅನಾಥ ಮಕ್ಕಳಿಗೆ ಬೆಡ್‌ಗಳ ವಿತರಣೆ

» **ಚಿತ್ರದುರ್ಗ**

ಒಂದು ವರ್ಷದಲ್ಲಿ ಇನ್ನರ್‌ವೀಲ್ಡ್ ಕ್ಲಬ್‌ನಿಂದ ನೂರ ಐವತ್ತು ಪ್ರಾಜೆಕ್ಟ್‌ಗಳನ್ನು ನೀಡಲಾಗಿದೆ ಎಂದು ಇನ್ನರ್‌ವೀಲ್ಡ್ ಕ್ಲಬ್ ಅಧ್ಯಕ್ಷೆ ಹಾಗೂ ಮಹಿಳಾ ಸೇವಾ ಸಮಾಜದ ಉಪಾಧ್ಯಕ್ಷೆ ಶ್ರೀಮತಿ ಮೋಕ್ಷರುದ್ರಸ್ವಾಮಿ ಹೇಳಿದರು.

ಮಹಿಳಾ ಸೇವಾ ಸಮಾಜದಲ್ಲಿರುವ 25 ಅನಾಥ ಮಕ್ಕಳಿಗೆ ರೆಗ್ಜಿನ್ ಪೋಮ್ ಬೆಡ್‌ಗಳನ್ನು ವಿತರಿಸಿ ಮಾತನಾಡಿದರು.

ಎರಡು ಸರ್ಕಾರಿ ಶಾಲೆಗಳಿಗೆ ನೂರು ಲೀಟರ್ ಸಾಮರ್ಥ್ಯವುಳ್ಳ ಆರ್.ಓ. ವಾಟರ್ ಫಿಲ್ಟರ್, ಬೆಂಚ್, ನೋಟ್‌ಬುಕ್‌ಗಳನ್ನು ವಿತರಿಸಿದ್ದೇವೆ. ಇಬ್ಬರು ಬಡ ಮಹಿಳೆಯರಿಗೆ ಹೊಲಿಗೆ ಯಂತ್ರ ಕೊಡಲಾಗಿದೆ. ಇದರಿಂದ ಅವರು ಮನೆಯಲ್ಲಿಯೇ ಬಟ್ಟೆಗಳನ್ನು ಹೊಲಿಯುವ ಮೂಲಕ ಸ್ವಾವಲಂಭಿಯಾಗಿ ಬದುಕಲು ನೆರವಾಗಲಿದೆ ಎಂದರು.

ಅಂಗವಿಕಲರಿಗೆ ತ್ರಿಚಕ್ರ ವಾಹನ ವಿತರಿಸಲಾಗಿದೆ. ಮಹಿಳೆಯರಿಗೆಉಚಿತಆರೋಗ್ಯತಪಾಸಣೆಯನ್ನು ಮಾಡಿಸಲಾಗಿದೆ. ಒಟ್ಟಾರೆ ಒಂದು ವರ್ಷದ ನನ್ನ ಅವಧಿಯಲ್ಲಿ ಅನೇಕ ಸಮಾಜಮುಖಿ ಕೆಲಸಗಳನ್ನು ಮಾಡಿರುವ ಆತ್ಮತೃಪ್ತಿಯಿದೆ ಎಂದು ಮೋಕ್ಷರುದ್ರಸ್ವಾಮಿ ತಿಳಿಸಿದರು.ವೀಣಸ್ವಾಮಿ ಮಾತನಾಡಿ ಇನ್ನರ್‌ವೀಲ್ಡ್ ಕ್ಲಬ್ ಅಧ್ಯಕ್ಷೆ ಶೀಮತಿ ಮೋಕ್ಷರುದ್ರಸ್ವಾಮಿ ಒಂದು ವರ್ಷದ ಅವಧಿಯಲ್ಲಿ ಅನೇಕ ಉಪಯುಕ್ತ ಕೆಲಸಗಳನ್ನು ಮಾಡಿದ್ದಾರೆ. ಮಹಿಳಾ ಸೇವಾ ಸಮಾಜದಲ್ಲಿರುವ 25 ಅನಾಥ ಮಕ್ಕಳಿಗೆ ಗುಣಮಟ್ಟದ ರೆಗ್ಜಿನ್ ಬೆಡ್‌ಗಳನ್ನು ನೀಡಿರುವುದಲ್ಲದೆ ಬಡ ಮಕ್ಕಳಿಗೆ ಪುಸ್ತಕ, ನೋಟ್‌ಬುಕ್‌ಗಳನ್ನು ವಿತರಿಸಿ ಶಿಕ್ಷಣಕ್ಕೆ ನೆರವಾಗಿದ್ದಾರೆಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಲತಾ ಉಮೇಶ್, ರಾಜೇಶ್ವರಿ ಸಿದ್ದರಾಂ, ನಂದಿನಿಶಿವಪ್ರಕಾಶ್, ಶಿಲ್ಪಜಗದೀಶ್, ಭಾಗ್ಯ ಕುಮಾರ್, ಮಹಾಂತಮ್ಮ, ವಿಜಯ ಇನ್ನು ಮುಂತಾದವರು ಈ ಸಂದರ್ಭದಲ್ಲಿ ಹಾಜರಿದ್ದರು.




## ಡೆಂಗಿ ದಿನದ ಪ್ರಯುಕ್ತ ಪ್ರೌಢಶಾಲಾ ವಿಜ್ಞಾನ ಶಿಕ್ಷಕರಿಗೆ ಕಾರ್ಯಾಗಾರ



» **ಹೊಸದುರ್ಗ**

ಪಟ್ಟಣದ ಆರೋಗ್ಯಾಧಿಕರಿಗಳ ಕಛೇರಿಯಲ್ಲಿ ಪ್ರೌಡಶಾಲಾ ವಿಜ್ಞಾನ ಶಿಕ್ಷಕರಿಗೆ ಡೆಂಗಿ ನಿಯಂತ್ರಣದ ಬಗ್ಗೆ ಅಡ್ವೊಕೆಸಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಯಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಜಿಲ್ಲಾ ಕೀಟ ಶಾಸ್ತ್ರಜ್ಞ ರಾದ ನಂದಿನಿ ಕಡಿ ಈಡಿಸ್ ಸೊಳ್ಳೆಯಿಂದ ಹರಡುವ ಡೆಂಗಿ ಜ್ವರವು ಸಾರ್ವಜನಿಕ ಆರೋಗ್ಯ ಸಮಸ್ಯೆಯಾಗಿದೆ, ಪೂರ್ವ ಮುಂಗಾರು, ಮುಂಗಾರು ಹಾಗೂ ಮುಂಗಾರಿನ ನಂತರದ ದಿನಗಳಲ್ಲಿ ಸೊಳ್ಳೆಗಳ ಸಾಂದ್ರತೆ ಜಾಸ್ತಿಯಾಗಿ ಡೆಂಗಿ ರೋಗವು ಉಲ್ಬಣವಾಗುತ್ತದೆ ಎಂದರು.ವಯಸ್ಕ ಸೊಳ್ಳೆಗಳ ನಿಯಂತ್ರಣಕ್ಕೆ ಕೀಟನಾಶಕಗಳ ಬಳಕೆ, ಧೂಮಲೀಕರಣ, ಸೊಳ್ಳೆಗಳ ಉತ್ಪತ್ತಿಯ ಎರಡನೇ ಹಂತವಾದ ಲಾರ್ವ ನಿಯಂತ್ರಣಕ್ಕೆಜೈವಿಕ ವಿಧಾನವಾದ ಲಾರ್ವಹಾರಿ ಮೀನುಗಳನ್ನು ಆರೋಗ್ಯಇಲಾಖೆಯನೀರಿನ ತಾಣಗಳಿಗೆ ಬಿಡುತ್ತಿದೆ ಎಂದರು. ಲಾರ್ವ ಸಮೀಕ್ಷೆಗೆ ಆರೋಗ್ಯ ಸಿಬ್ಬಂದಿ, ಆಶಾ ಕಾರ್ಯಕರ್ತೆಯರು ಬಂದಾಗ ಅವರೊಂದಿಗೆ ಸಹಕರಿಸಬೇಕೆಂದರು, ಮನೆಗಳಲ್ಲಿ ನೀರಿನ ತಾಣಗಳಾದ ಡ್ರಮ್,ಬ್ಯಾರೆಲ್,ತೊಟ್ಟಿಗಳನ್ನು ವಾರಕ್ಕೊಮ್ಮೆ ತೊಳೆದು,ಹೊಣಗಿಸಿ ನೀರುತುಂಬಿಸಲು ಹೇಳಿದರು.ಸಾರ್ವಜನಿಕ ಅಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ.ರಾಕೇಶ್ ಮಾತನಾಡಿ ವಿಪರೀತಜ್ವರ, ಕಣ್ಣುಗುಡ್ಡೆಗಳಲ್ಲಿ ನೋವು, ಮಾಂಸಖಂಡ ಮತ್ತು ಕೀಲು ನೋವು ಮುಂತಾದ ರೋಗ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ನಿರ್ಲಕ್ಷಿಸಿದರೆ ಡೆಂಗಿರಕ್ತ ಸ್ರಾವ ಮತ್ತು ಮೆದುಳು ಸೊಂಕುವುಂಟಾಗಿ ಸಾವು ಸಹ ಸಂಭವಿಸಬಹುದು ಎಂಬ ಎಚ್ಚರಿಕೆಯನ್ನ ನೀಡಿದರು.ಕ್ಷೇತ್ರಆರೋಗ್ಯ ಶಿಕ್ಷಣಾಧಿಕಾರಿ ವೀರೆಂದ್ರ ಪಾಟೀಲ್ ಮಾತನಾಡಿ ಸಾರ್ವಜನಿಕರು ನೀರಿನ ಸರಿಯಾದ ನಿರ್ವಹಣೆ ಮತ್ತು ಸ್ವಚ್ಚ ಪರಿಸರವನ್ನು ಕಾಪಾಡಿಕೊಂಡು ಸೊಳ್ಳೆಗಳನ್ನು ನಿಯಂತ್ರಿಸಿ ಡೆಂಗಿ ತಡೆಗಟ್ಟಿ ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಮೇಲ್ವಿಚಾರಕರಾದ ನಾಗರಾಜ್, ಹಿರಿಯಆರೋಗ್ಯ ನಿರೀಕ್ಷಣಾಧಿಕಾರಿ ಸಿದ್ದರಾಮಪ್ಪ, ಬಿಪಿಎಂ ಕಿರಣ್, ಆರೋಗ್ಯ ನಿರೀಕ್ಷಣಾಧಿಕಾರಿ ಮಲ್ಲಿಕಾರ್ಜುನ್,ಆಶಾ ಮೇಲ್ವಿಚಾರಕಿ ಬಸವಲಿಂಗಮ್ಮ ಮತ್ತು ತಾಲ್ಲೋಕಿನಎಲ್ಲಾ ಪ್ರೌಡಶಾಲೆಗಳ ವಿಜ್ಞಾನ ಶಿಕ್ಷಕರು ಪಾಲ್ಗೊಂಡಿದ್ದರು.


# ಸಾಣೇಹಳ್ಳಿ ಶ್ರೀ ಪಂಡಿತಾರಾಧ್ಯ ಶ್ರೀಗಳ ಪ್ರಶ್ನೆ

**ಒಂದೇ ಕುಟುಂಬದ 13 ಜನರು ಸಾವನ್ನೊಪ್ಪಿದರು.ಹಾಗಾದರೆ ದರ್ಶನ ಪಡೆದ ದೇವರು 13 ಜನರ ಜೀವವನ್ನು ಕಾಪಾಡಿದ್ನಾ?**

» **ಹೊಸದುರ್ಗ**

ಗುಡಿ ಗುಂಡಾರಗಳು ಜನರನ್ನ ದಾರಿ ತಪ್ಪಿಸುತ್ತಿವೆ ಜನರನ್ನು ದಾರಿ ತಪ್ಪಿಸುವಂಥವು ಗುಡಿ-ಗುಂಡಾರಗಳು ಎಂದು ಸಾಣೇಹಳ್ಳಿ ಶ್ರೀ ಪಂಡಿತಾರಾಧ್ಯ ಶ್ರೀಗಳ ಪ್ರಶ್ನೆ ಮಾಡಿದ್ದಾರೆ.ತಾಲೂಕಿನ ಸಾಣೇಹಳ್ಳಿಯ ಶ್ರೀಮಠದಲ್ಲಿ ಶನಿವಾರ ನಡೆದ ತಿಂಗಳ ಇಷ್ಟಲಿಂಗ ದೀಕ್ಷಾ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡಿದ

ಶ್ರೀಗಳು ಶುಕ್ರವಾರ ಬ್ಯಾಡಗಿ ತಾಲ್ಲೂಕಿನ ಗುಂಡೇನಹಳ್ಳಿ ಕ್ರಾಸ್ ಬಳಿ ನಡೆದ ಭೀಕರ ಅಪಘಾತದಲ್ಲಿ 13 ಜನ ಸಾವನ್ನೊಪ್ಪಿದ್ದು ನಮಗೆ ತುಂಬಾ ದುಃಖ ತಂದಿದೆ. ಹೊಸದಾಗಿ ವಾಹನ ಕೊಂಡಾಗ ಮನೆಯವರೆಲ್ಲಾ ದೇವರ ದರ್ಶನಕ್ಕೆ ಹೋಗಬೇಕು ಅಂತ ಹೇಳಿ ಸವದತ್ತಿ ಎಲ್ಲಮ್ಮ ಮುಂತಾದ ದೇವರ ದರ್ಶನ ಪಡೆದುಕೊಂಡು ವಾಪಾಸ್ ಬರುವಾಗ ಅಫಘಾತಕ್ಕೀಡಾಗಿ ಭದ್ರಾವತಿ ತಾಲ್ಲೂಕಿನ ಎಮ್ಮಿಹಟ್ಟಿಯ ಒಂದೇ ಕುಟುಂಬದ 13 ಜನರು ಸಾವನ್ನೊಪ್ಪಿದರು. ಹಾಗಾದರೆ ದರ್ಶನ ಪಡೆದ ದೇವರು 13 ಜನರ ಜೀವವನ್ನು ಕಾಪಾಡಿದ್ನಾ? ಖಂಡಿತಾ ಇಲ್ಲ. ದೇವರು ಅಲ್ಲೆಲ್ಲೋ ಇದಾನೆ ಅಂತ ಹೋಗಿದ್ದು ನಿಮ್ಮ ತಪ್ಪು. ನನ್ನೊಳಗಡೆಯೇ ದೇವರಿದ್ದಾನೆ ಎಂದು ತಿಳಿದುಕೊಂಡಿದ್ದರೆ 13 ಜನರ ಪ್ರಾಣಾಪಯದಿಂದ ಪಾರಾಗುತ್ತಿದ್ದರು ಎಂದು ವ್ಯಾಖ್ಯಾನಿಸಿರುವ ಶ್ರೀಗಳು ಇತ್ತೀಚಿಗೆ ಮಾಧ್ಯಮಗಳಲ್ಲಿ ಬರುವ ಘಟನೆಗಳನ್ನು ನೋಡಿದರೆ ಅಸಹ್ಯವಾಗಿತ್ತದೆ. ಕಾರಣ ಅವರಿಗೆ ಅನೇಕ ಜನರಿಗೆ ಚಿಕ್ಕ ವಯಸ್ಸಿನಲ್ಲಿ ಒಳ್ಳೆಯ ಸಂಸ್ಕಾರ ಬಂದಿದರೆ ಈ ರೀತಿಯ ಅವಾಂತರಗಳಿಗೆ ಒಳಗಾಗುತ್ತಿರಲಿಲ್ಲ. ಹಾಗಾಗಿಯೇ ಮನುಷ್ಯನಿಗೆ ಇಷ್ಟ ಲಿಂಗದೀಕ್ಷೆ ಎನ್ನುವಂಥದ್ದು ಸಂಸ್ಕಾರ ಕೊಟ್ಟು ಸನ್ಮಾರ್ಗದಲ್ಲಿ ಕರೆದುಕೊಂಡು ಹೋಗುವಂಥದ್ದು ಎಂದರು. ಇಷ್ಟಲಿಂಗ ಲಿಂಗದೀಕ್ಷೆ ಪಡೆದುಕೊಳ್ಳುವವರಿಗೆ ಲಿಂಗ, ವರ್ಗ, ಜಾತಿ ಧರ್ಮ ಪಂಥ, ಪಂಗಡ ಎನ್ನುವ ತಾರತಮ್ಯವಿಲ್ಲ. ಎಲ್ಲರೂ ಇಷ್ಟಲಿಂಗ ದೀಕ್ಷೆಯನ್ನು ಪಡೆದುಕೊಳ್ಳಬಹುದು ಎಂದರು.



## ಪ್ರಮುಖ ಸುದ್ದಿ

# ಉಪ್ಪಾರ ಸಮುದಾಯದ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ

» **ಚಳ್ಳಕೆರೆ**

ನಾಡಿನ ಇತಿಹಾಸದಲ್ಲಿ ಜನರ ನೀರಿನ ಸಮಸ್ಯೆಯನ್ನು ನಿವಾರಿಸಲು ಪಾತಾಳದಲ್ಲಿ ಅಡಗಿದ್ದ ಗಂಗೆಯನ್ನು ತನ್ನ ಭಕ್ತಿಯಿಂದ ಮೇಲೆತ್ತಿದ ಮಹಾನ್ ಪುರುಷ ಭಗೀರಥ ಮಹರ್ಷಿಗಳ ಜಯಂತಿ ಆಚರಣೆ ಸಂತಸ ತಂದಿದೆ. ಭಗೀರಥರ ಈ ಪುಣ್ಯ ಕಾರ್ಯ ಇಂದಿಗೂ ಜನರಲ್ಲಿ ಶಾಶ್ವತವಾಗಿ ನೆಲೆಯೂರಿದೆ ಎಂದು ಕ್ಷೇತ್ರದ ಶಾಸಕ, ಸಣ್ಣಕೈಗಾರಿಕೆ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಟಿ.ರಘುಮೂರ್ತಿ ತಿಳಿಸಿದರು.

ಅವರು, ತಾಲ್ಲೂಕಿನ ಗೋಪನಹಳ್ಳಿ ಗ್ರಾಮದಲ್ಲಿ ಉಪ್ಪಾರ ಸಮಾಜದ ಹಾಗೂ ಭಗೀರಥ ಯುವಕ ಸಂಘ ಹಮ್ಮಿಕೊಂಡಿದ್ದ ಭಗೀರಥ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಉಪ್ಪಾರ ಸಮಾಜದ ಅಭಿವೃದ್ಧಿಗಾಗಿ ಹೆಚ್ಚಿನ ಅನುದಾನ ನೀಡುವಂತೆ ಶಾಸಕರಲ್ಲಿ ಮನವಿ ಮಾಡಲಾಯಿತು. ಮುಂದಿನ ದಿನಗಳಲ್ಲಿ ಈ ಕುರಿತು ಉತ್ತಮ ತೀರ್ಮಾನ ಕೈಗೊಳ್ಳುವ ಭರವಸೆಯನ್ನು ಶಾಸಕರು ನೀಡಿದರು.







ಉಪ್ಪಾರ ಸಂಘದ ತಾಲ್ಲೂಕು ಅಧ್ಯಕ್ಷ ಎಚ್.ಹನುಮಂತಪ್ಪ, ಯುವಕ ಸಂಘದ ಅಧ್ಯಕ್ಷ ಡಿಎಂಕೆ ರವಿ, ನಿವೃತ್ತ ಪ್ರಾಂಶುಪಾಲ ಟಿ.ನಾಗರಾಜು, ಗ್ರಾಮ ಪಂಚಾಯಿತಿ ಅಧ್ಯಕ್ಷೆ ರಾಧ, ಸದಸ್ಯರಾದ ನಾಗರಾಜು, ಉಮೇಶ್, ಹರೀಶ್, ರವಿಕುಮಾರ್, ಮುಖಂಡರಾದ ತಿಮ್ಮರಾಯಪ್ಪ,ರಾಯಣ್ಣ, ಲಕ್ಷ್ಮಣ, ರಂಗಸ್ವಾಮಿ ಮುಂತಾದವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಭಗೀರಥ ಜಯಂತಿ ನಿಮಿತ್ತ ಗ್ರಾಮದ ರಸ್ತೆಗಳಲ್ಲಿ ಭಗೀರಥ ಮಹರ್ಷಿಗಳ ಭಾವಚಿತ್ರ ಮೆವರಣಿಗೆ ನಡೆಸಲಾಯಿತು.


Printed by: GOVINDAPPA.T Published by: DARSHAN.T Owned by: DARSHAN.T and Printed at: ASHAYA PRINTERS No.94, C.M.C. Colony, Yangammana Katte, Chitradurga-577 501, Chitradurga Dist, Karnataka state. Published at : No. 55 Ingaladal Main Street, Near Canara Banak , Ingaladal Village, Ingaladal Post - 577524, Chitradurga Tq, Chitradurga Dist, Karnataka state. Editor : DARSHAN.T